# 58

# ಯೆರೂಸಲೇಮಿನ ನಾಶನ

# (24:15-35)

24:15-35ರಲ್ಲಿ, ಯೇಸು ಶಿಷ್ಯರ ಪ್ರಶ್ನೆಗಳಿಗೆ ಉತ್ತರಿಸುವದನ್ನು ಮುಂದುವರೆಸುತ್ತಾನೆ. ಆತನು ಅವರಿಗೆ ಯೆರೂಸಲೇಮನ್ನು ಮುತ್ತಿಗೆ ಹಾಕುವಾಗ ಅಲ್ಲಿಂದ ಪಲಾಯನ ಮಾಡಿರಿ ಎಂದು ಹೇಳುತ್ತಾನೆ (24:15-22). ನಂತರ ಆತನು ಅವರಿಗೆ "ಸುಳ್ಳು ಕ್ರಿಸ್ತರು" ಬಂದು ಬಿಡುಗಡೆಯನ್ನು ನೀಡುತ್ತೇವೆ ಎಂದು ಹೇಳುವಾಗ ಅವರಿಗೆ ಕಿವಿಗೊಡಬೇಡಿರಿ ಎಂದು ಹೇಳಿದನು (24:23-28). ನಂತರ ಆತನು ಮನುಷ್ಯ ಕುಮಾರನ ಸೂಚನೆಯ ಕುರಿತು ಮಾತನಾಡುತ್ತಾನೆ (24:29-31) ಮತ್ತು ಯೆರೂಸಲೇಮಿನ ನಾಶನದ ಸಮಯದ ಕುರಿತು ಮಾತನಾಡುತ್ತಾನೆ (24:32-35).

## "ಹಾಳುಮಾಡುವ ಅಸಹ್ಯ ವಸ್ತು ನೀನು ನೋಡುವಾಗ ಓಡಿಹೋಗು" (24:15-22)

**15ಅದರಿಂದ ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳುಮಾಡುವ ಅಸಹ್ಯವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುವದನ್ನು ನೀವು ಕಾಣುವಾಗ (ಇದನ್ನು ಓದುವವನು ತಿಳುಕೊಳ್ಳಲಿ) 16ಯುದಾಯದಲ್ಲಿರುವವರು ಬೆಟ್ಟಗಳಿಗೆ ಓಡಿಹೋಗಲಿ; 17ಮಾಳಿಗೆಯ ಮೇಲೆ ಇರುವವನು ತನ್ನ ಮನೆಯೊಳಗಿರುವದನ್ನು ತೆಗೆದುಕೊಳ್ಳುವದಕ್ಕೆ ಇಳಿಯದೆ, 18ಹೊಲದಲ್ಲಿರುವವನು ತನ್ನ ಹೊದಿಕೆಯನ್ನು ತೆಗೆದುಕೊಳ್ಳುವದಕ್ಕೆ ಹಿಂತಿರುಗಿ ಬಾರದೆ ಓಡಿಹೋಗಲಿ. 19ಆದರೆ ಆ ದಿನಗಳಲ್ಲಿ ಬಸುರಿಯರಿಗೂ ಮೊಲೆಕೂಸಿರುವ ಹೆಂಗಸರಿಗೂ ಆಗುವ ಕಷ್ಟವನ್ನು ಏನು ಹೇಳಲಿ. 20ಆಗ ಮಹಾ ಸಂಕಟ ಉಂಟಾಗುವದರಿಂದ ನಿಮ್ಮ ಪಲಾಯನವು ಚಳಿಗಾಲದಲ್ಲಿಯಾಗಲಿ ಸಬ್ಬತ್‌ದಿನದಲ್ಲಿಯಾಗಲಿ ಆಗಬಾರದೆಂದು ಪ್ರಾರ್ಥನೆಮಾಡಿರಿ. 21ಅಂಥ ಸಂಕಟವು ಲೋಕ ಹುಟ್ಟಿದ್ದು ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ. 22ಇನ್ನು ಮೇಲೆಯೂ ಆಗುವದಿಲ್ಲ. [ಕರ್ತನು] ಆ ದಿನಗಳನ್ನು ಕಡಿಮೆಮಾಡದಿದ್ದರೆ ಒಂದು ನರಪ್ರಾಣಿಯಾದರೂ ಉಳಿಯದು; ಆದರೆ ತಾನು ಆದುಕೊಂಡವರಿಗೋಸ್ಕರ ಆ ದಿನಗಳನ್ನು ಕಡಿಮೆಮಾಡುವನು.**

**ವಚನ 15.** ಅನೇಕರು, **ಹಾಳುಮಾಡುವ ಅಸಹ್ಯವಸ್ತುಗಳು** ಅಂತ್ಯ ಕಾಲದಲ್ಲಿ ಬರುತ್ತವೆ ಎಂದು ಕೆಲವರು ಬೋಧಿಸುತ್ತಾರೆ. ಆದರೂ, ಈ ಸಂಗತಿ ಯಾವಾಗ ಸಂಭವಿಸುತ್ತದೆ ಎಂದು ನಾವು ಆಶ್ಚರ್ಯಚಕಿತರಾಗುವದಕ್ಕೆ ಇರಲಿಲ್ಲ, ಯೇಸು ಇದು ಯೆರೂಸಲೇಮಿನಲ್ಲಿ ಸಂಭವಿಸುತ್ತದೆ ಮತ್ತು ದೇವಾಲಯವು ನಾಶವಾಗುತ್ತದೆ ಎಂದು ನಿರ್ದಿಷ್ಟಪಡಿಸಿದ್ದಾನೆ. ಲೂಕನ ಸುವಾರ್ತೆಯಲ್ಲಿ ಯೇಸು ಇದನ್ನು ಸ್ಪಷ್ಟಪಡಿಸುತ್ತಾನೆ. ಲೂಕನ ಸುವಾರ್ತೆಯಲ್ಲಿ ಯೇಸು ಇದನ್ನು ಸ್ಪಷ್ಟಪಡಿಸುತ್ತಾನೆ, "*ದಂಡುಗಳು ಯೆರೂಸಲೇಮ ಪಟ್ಟಣಕ್ಕೆ* ಮುತ್ತಿಗೆ ಹಾಕಿರುವದನ್ನು ನೀವು ಕಾಣುವಾಗ ಅದು ಹಾಳಾಗುವ ಕಾಲ ಸಮೀಪವಾಯಿತೆಂದು ತಿಳುಕೊಳ್ಳಿರಿ" (ಲೂಕ 21:20; ಒತ್ತಿ ಹೇಳಿದ್ದು ನನ್ನದು). ಆದುದರಿಂದ, ಎಚ್ಚರಿಕೆಯು ಯೆರೂಸಲೇಮಿನಲ್ಲಿ ವಾಸಿಸುವವರಿಗೆ ರೋಮಾ ಸೈನ್ಯವು ಅವರನ್ನು ಸಮೀಪಿಸುವಾಗ ಅವರು ತಿಳಿದುಕೊಳ್ಳಬೇಕು.

"ಹಾಳುಮಾಡುವ ಅಸಹ್ಯ ವಸ್ತುವಿನ" ಕುರಿತು **ಪ್ರವಾದಿಯಾದ ದಾನಿಯೇಲನಿಂದ** ಮುಂದಾಗಿ ತಿಳಿಸಿದ್ದಾನೆ (ದಾನಿಯೇಲ 9:27; 11:31; 12:11). ಅವನ ಮಾತುಗಳು ಸೆಲಿಸ್ಯುಡ್‌ನ ಅಂತಿಯೋಕ್ಯದ IV Epiphanesನ ದುಷ್ಟ ಕೃತ್ಯಗಳಲ್ಲಿ ಮೊದಲು ನೆರವೇರಿದವು, ಅವನು ಕ್ರಿ.ಪೂ. 168ರಲಿ Zeus ಎಂಬ ಅನ್ಯ ದೇವರಿಗೆ ವೇದಿಯನ್ನು ಯೆಹೂದ್ಯರ ದೇವಾಲಯದಲ್ಲಿ ಸರ್ವಾಂಗಹೋಮವನ್ನು ಸಲ್ಲಿಸುವ ಯಜ್ಞವೇದಿಯ ಮೇಲೆ ಕಟ್ಟಿದನು ಮತ್ತು ಅದರ ಮೇಲೆ ಒಂದು ಹಂದಿಯನ್ನು ಯಜ್ಞವಾಗಿ ಅರ್ಪಿಸಿದನು.[1] ದಾನಿಯೇಲನ ಮಾತುಗಳು ಹಾಳು ಮಾಡುವ ಸೂಚನೆಯಾಗಿ ಕ್ರಿ.ಶ. 70ರಲ್ಲಿ ಯೆರೂಸಲೇಮಿನ ನಾಶನದಲ್ಲಿ ಅಂತಿಮವಾಗಿ ನೆರವೇರಿದವು.

ಯೇಸು ಹೇಳಿದ್ದು, ಹಾಳು ಮಾಡುವ ಅಸಹ್ಯ ವಸ್ತುವು **ಪವಿತ್ರಸ್ಥಾನದಲ್ಲಿ ನಿಂತಿರುತ್ತದೆ** ಎಂದು ಯೇಸು ಹೇಳುತ್ತಾನೆ. ಇದು ದೇವಾಲಯದ ಕುರಿತು ಒಂದು ಉಲ್ಲೇಖವಾಗಿದೆ (ಅಪೊಸ್ತಲರ ಕೃತ್ಯಗಳು 6:13; 21:28). ಮೊದಲು ಸಂಭವಿಸಿದ ಹಲವು ಘಟನೆಗಳು ಮತ್ತು ಯೆರೂಸಲೇಮಿನ ನಾಶನದ ಸಮಯದಲ್ಲಿ ನಡೆದ ಘಟನೆಗಳನ್ನು "ಹಾಳು ಮಾಡುವಂಥ ಅಸಹ್ಯ ವಸ್ತುವು" ಎಂದು ವರ್ಗೀಕರಿಸಬಹುದು. ಈ ಉಲ್ಲೇಖವು ಯೆಹೂದಿ ಮತಾಭಿಮಾನಿಗಳು ಒಳಗಿನ ಪ್ರಾಂಗಣವನ್ನು ಆಕ್ರಮಿಸಿಕೊಳ್ಳುವದರ ಮತ್ತು ಜನರನ್ನು ಕೊಲೆಮಾಡುವದರ ಮೂಲಕ ದೇವಾಲಯವನ್ನು ಅಶುದ್ಧಗೊಳಿಸಿದರು.[2] Josephus ರವರ ಪ್ರಕಾರ, ಮಹಾಯಾಜಕನಾದ Ananusನು ಅವರ ಮಧ್ಯದಲ್ಲಿ ನಿಂತುಕೊಂಡು ಹೀಗೆ ಹೇಳಿದನು, "ನಿಶ್ಚಯವಾಗಿ, ದೇವಾಲಯವು ಇಷ್ಟೊಂದು ಅಸಹ್ಯ ವಸ್ತುಗಳಿಂದ ತುಂಬಿರುವದನ್ನು ನೋಡುವದಕ್ಕಿಂತ ಅಥವಾ ಈ ಪರಿಶುದ್ಧ ಸ್ಥಳಗಳನ್ನು ಈ ನೀಚರು ತಮ್ಮ ರಕ್ತಪಾತಕ ಕಾಲುಗಳಿಂದ ಮನಬಂದಂತೆ ತುಳಿದಾಡುವದನ್ನು ನೋಡುವದಕ್ಕಿಂತ ನಾನು ಸತ್ತು ಹೋಗಿದ್ದರೆ ಒಳ್ಳೇಯದಾಗುತ್ತಿತ್ತು."[3] ದೇವಾಲಯವನ್ನು ಬೆಂಕಿಯಿಂದ ನಾಶಗೊಳಿಸುವಾಗ, Titusನು ದೇವಾಲಯದ ಅತಿಪರಿಶುದ್ಧ ಸ್ಥಳವನ್ನು ಪ್ರವೇಶಿಸಿದನು.[4] ಆತನ ಸೈನಿಕರು ಅಲ್ಲಿಯ ಪರಿಶುದ್ಧ ಪಾತ್ರೆಗಳನ್ನು ಕೊಳ್ಳೆಹೊಡೆದರು ಮತ್ತು ಅವುಗಳನ್ನು ರೋಮಾ ಪಟ್ಟಣಕ್ಕೆ ಕೊಂಡೊಯ್ಯದರು; ಈ ಎಲ್ಲಾ ಘಟನೆಗಳನ್ನು Arch of Titusನನ್ನು ಜ್ಞಾಪಕಾರ್ಥವಾಗಿ ಆಚರಿಸುತ್ತಾರೆ. ತಮ್ಮ ವಿಜಯೋತ್ಸವವನ್ನು ಆಚರಿಸುವದಕ್ಕಾಗಿ ರೋಮನ್ಸ್‌ರು ಯೆಹೂದ್ಯರ ದೇವಾಲಯದ ಹೊರಗಿನ ಪ್ರಾಂಗಣದಲ್ಲಿ ತಮ್ಮ ಯೋಗ್ಯತೆಗೆ ತಕ್ಕಂತೆ ಯಜ್ಞವನ್ನು ಅರ್ಪಿಸುವದರ ಮೂಲಕ ಅಶುದ್ಧಗೊಳಿಸಿದರು.[5] ರೋಮನ್ನರು ದೇವಾಲಯವನ್ನು ಅಶುದ್ಧಗೊಳಿಸುವ ಕಾರ್ಯವನ್ನು ಮುಗಿಸುವದರೊಳಗಾಗಿ ಹಾಗೂ ಅದು ಕ್ರೈಸ್ತರಿಗೆ ಓಡಿಹೋಗುವದಕ್ಕೆ ಬಹಳ ತಡವಾಗಿತ್ತು (24:16).

ಆಸಕ್ತಿಯುತವಾಗಿ, ಮತ್ತಾಯನು ಮಾರ್ಕನು ಸೇರಿಸಿದಂತೆ (ಮಾರ್ಕ 13:14) **ಓದುವವನು ತಿಳುಕೊಳ್ಳಲಿ** ಎಂಬ ಉಪವಾಕ್ಯದ ಹೇಳಿಕೆಯನ್ನು ಸೇರಿಸುತ್ತಾನೆ. ಇಂಥಹ ಹೋಲಿಕೆಗಳು ಸುವಾರ್ತೆಗಳ ಲೇಖಕರ ನಡುವೆ ಇರುವ ವಾಸ್ತವಿಕ ಅವಲಂಬವೆಯನ್ನು ಸೂಚಿಸುತ್ತದೆ - ಪವಿತ್ರಾತ್ಮನಿಂದ ನಡೆಸಲ್ಪಟ್ಟ ಪ್ರಕ್ರಿಯೆ. "ಓದುವವನು ತಿಳಿದುಕೊಳ್ಳಲಿ" ಎಂಬ ಹೇಳಿಕೆಯು ಅಂತರ್‌ಜ್ಞಾನವುಳ್ಳ ವಿಶ್ವಾಸಿಗಳಿಗೆ ಎಚ್ಚರವಾಗಿದ್ದು ಸರಿಯಾದ ಕಾರ್ಯವನ್ನು ಮಾಡಲು ಪಂಥಾಹ್ವಾನ ನೀಡುತ್ತದೆ (ನೋಡಿರಿ ದಾನಿಯೇಲ 12:10; ಪ್ರಕಟಣೆ 13:18).

**ವಚನ 16.** ಈ ವಚನವು **ಯುದಾಯದಲ್ಲಿರುವ** ವಿಶ್ವಾಸಿಗಳು ಯಾವ ಕಾರ್ಯವನ್ನು ಕೈಕೊಳ್ಳಬೇಕು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅವರು ರೋಮಾ ಸೈನಿಕರು ಬರುವದನ್ನು ಕಾಣುವಾಗ (ಲೂಕ 21:20), ಅವರು ತಮ್ಮ ಸ್ವಂತ ಜೀವಿತಗಳನ್ನು ರಕ್ಷಿಸಿಕೊಳ್ಳುವದಕ್ಕಾಗಿ **ಬೆಟ್ಟಗಳಿಗೆ ಓಡಿಹೋಗಬೇಕು.** ಹಳೆ ಒಡಂಬಡಿಕೆಯ ಅವಧಿಯಲ್ಲಿ, ಇಸ್ರಾಯೇಲರು ತಮ್ಮ ವೈರಿಗಳಿಂದ ಗವಿಗಳಲ್ಲಿ ಮತ್ತು ಬಂಡೆಗಳ ಬಿರುಕಿನಲ್ಲಿ ಅಡಗಿಕೊಳ್ಳುತ್ತಿದ್ದರು, ಮತ್ತು ಗುಡ್ಡ ಪ್ರದೇಶಗಳಲ್ಲಿ ಅವರನ್ನು ಸೋಲಿಸುವದು ಕಷ್ಟಕರವಾಗುತಿತ್ತು (ನ್ಯಾಯಸ್ಥಾಪಕರು 6:2;

1 ಸಮುವೇಲ 13:6; 1 ಅರಸುಗಳು 18:4; ನೋಡಿರಿ ಯೆಶಾಯ 2:19, 21; ಯೆರೆಮೀಯ 49:30; ಯೆಹೆಜ್ಕೇಲ 7:15, 16; 33:27). ಹಳೆ ಮತ್ತು ಹೊಸ ಒಡಂಬಡಿಕೆಯ ಮಧ್ಯದ ಅವಧಿಯಲ್ಲಿ, Maccabean ದಂಗೆಯಲ್ಲಿ ತೊಡಗಿಸಿಕೊಂಡವರಿಗೆ ಬೆಟ್ಟಗಳು ರಕ್ಷಣೆಯನ್ನು ಒದಗಿಸಿದ್ದವು.[6] ಈ ಸಮಯದಲ್ಲಿ, ಯೇಸು, ಸಹ ತನ್ನ ಹಿಂಬಾಲಕರಿಗೆ ಬೆಟ್ಟಗಳಿಗೆ ಓಡಿ ಹೋಗಿರಿ ಎಂದು ಹೇಳುತ್ತಾನೆ. Craig S. Keener ರವರು ಎಚ್ಚರಿಕೆಯನ್ನು ಈ ರೀತಿಯಾಗಿ ಅಳವಡಿಸಿಕೊಳ್ಳಬೇಕೆಂದು ಎಚ್ಚರಿಸುತ್ತಾರೆ: "ಯೇಸು ತನ್ನ ಹಿಂಬಾಲಕರಿಗೆ ಈ ಕಾಲದಲ್ಲಿ ಸಂಕಟಕ್ಕಿಡುಮಾಡುವ ಸಂಗತಿಗಳನ್ನು ನೈಜವಾಗಿ ಸ್ವೀಕರಿಸಬೇಕು ಮತ್ತು ಸಾಧ್ಯವಿದ್ದಲ್ಲಿ ಅವುಗಳಿಂದ ತಪ್ಪಿಸಿಕೊಳ್ಳಬೇಕು."[7]

ಚರ್ಚ್ ಇತಿಹಾಸಕಾರನಾದ Eusebius ರವರ ಪ್ರಕಾರ, ಕ್ರೈಸ್ತರು ಯೆರೂಸಲೇಮಿನಿಂದ ಹೊರಟು ಬಂದು ಅಂತಿಮವಾಗಿ ಯೋರ್ದಾನನಿಂದ ಆಚೆಗೆ Pellaದಲ್ಲಿ ನೆಲೆಸಿದರು.[8] ಎಫಿಫೆನಸ್ಸ್ ಹೇಳುತ್ತಾರೆ, ರೋಮನ್ನರು ಯೆರೂಸಲೇಮಿಗೆ ಮುತ್ತಿಗೆ ಹಾಕುವ ಸ್ವಲ್ಪ ಸಮಯ ಪೂರ್ವದಲ್ಲಿ ಈ ಪಲಾಯನ ಪ್ರಾರಂಭವಾಯಿತು.[9] ಆದರೂ, ಕೆಲವು ಪಂಡಿತರು Pella ಸಂಪ್ರದಾಯದ ಕುರಿತು ವಾದಿಸುತ್ತಾರೆ.[10] ಗಣನೆಗೆ ತೆಗೆದುಕೊಳ್ಳದೇ, ಯೇಸುವಿನ ಮಾತುಗಳು ಎರಡನೆಯ ಬರೋಣಕ್ಕೆ ಸಂಬಂಧಿಸಿಲ್ಲ ಎಂಬುದಕ್ಕೆ ಒತ್ತು ನೀಡಬೇಕು, ಆ ಸಮಯದಲ್ಲಿ ಯಾವುದೇ ಪಲಾಯನ ಸಾಧ್ಯವಿಲ್ಲ.

**ವಚನ 17.** ಯೇಸು ಹೇಳಿದ್ದು, ಯಾರಾದರೂ ಹಾಳುಮಾಡುವಂಥ ಅಸಹ್ಯ ವಸ್ತುವನ್ನು ನೋಡಿದಾಗ ಅಥವಾ ಒಬ್ಬನು ತನ್ನ ಮನೆಯ ಮಾಳಿಗೆಯ ಮೇಲೆ ಇರುವಾಗ ಯೆರೂಸಲೇಮ ಮುತ್ತಿಗೆ ಹಾಕಲ್ಪಟ್ಟರೆ ಅವನು, **ತನ್ನ ಮನೆಯೊಳಗಿರುವದನ್ನು ತೆಗೆದುಕೊಳ್ಳುವದಕ್ಕೆ ಇಳಿಯದೆ ಇರಲಿ.** ಪಾಲೇಸ್ತೀನ ದೇಶದಲ್ಲಿ ಮಾಳಿಗೆಗಳು ಚಪ್ಪಟೆಯಾಗಿದ್ದವು. ಅವುಗಳನ್ನು ಅವರು ಧಾನ್ಯಗಳನ್ನು ಒಣಗಿಸಲು (ಯೆಹೋಶುವ 2:6), ಮತ್ತು ವಿಶ್ರಾಂತಿ ತೆಗೆದುಕೊಳ್ಳುವದಕ್ಕಾಗಿ (1 ಸಮುವೇಲ 9:25), ಸುತ್ತಲಿನ ದೃಶ್ಯವನ್ನು ವೀಕ್ಷಿಸಲು (ಯೆಶಾಯ 22:1), ಮತ್ತು ಪ್ರಾರ್ಥನೆಗಾಗಿ (ಅಪೊಸ್ತಲರ ಕೃತ್ಯಗಳು 10:9) ಉಪಯೋಗಿಸುತ್ತಿದ್ದರು. ಬೇಸಿಗೆ ಸಮಯದಲ್ಲಿ, ಮನೆಯ ಮಾಳಿಗೆಗಳಲ್ಲಿ ಆನಂದಿಸುತ್ತಿದ್ದರು ವಿಶೇಷವಾಗಿ ರಾತ್ರಿಯ ಸಮಯದಲ್ಲಿ ಅಲ್ಲಿ ಅನುಭವಿಸುವ ತಂಗಾಳಿಯಿಂದಾಗಿ. ಅವುಗಳನ್ನು ಸಾಮಾನ್ಯವಾಗಿ ನಿಚ್ಚಣಿಕೆಯಿಂದ ಅಥವಾ ಮನೆಯ ಹೊರಗಿರುವ ಮೆಟ್ಟಿಲಿನಿಂದ ಹತ್ತಬಹುದಾಗಿತ್ತು. ಯೇಸು ಹೇಳುತ್ತಿರುವದು ಒಬ್ಬನು ತನ್ನ ಮನೆಯ ಒಳಗೆ ಹೋಗಿ ಅಗತ್ಯವಿರುವ ವಸ್ತುಗಳನ್ನು ಕಟ್ಟಿಕೊಳ್ಳದೇ ತನ್ನ ಮಾಳಿಗೆಯನ್ನು ಬಿಟ್ಟು ಹೋಗಬೇಕು. ಯಾಕಂದರೆ ಅವನಿಗೆ ಕಟ್ಟಿಕೊಳ್ಳುವದಕ್ಕೆ ಸಮಯವಿರುವದಿಲ್ಲ ಮತ್ತು ಹೆಚ್ಚಿನ ಚೀಲಗಳು ಅವನ ಪಲಾಯನಕ್ಕೆ ಅಡತಡೆಯಾಗಬಹುದು. ಕೆಳಕ್ಕೆ ಹೋಗುವದಕ್ಕೆ ಬದಲಾಗಿ ಒಬ್ಬನು ಮನೆಯ ಮಾಳಿಗೆಯಿಂದ ಇನ್ನೊಂದು ಮನೆಯ ಮಾಳಿಗೆ ಜಿಗಿಯುತ್ತಾ ಬೇಗನೇ ಹೊರಕ್ಕೆ ಹೋಗಬಹುದು.[11]

**ವಚನ 18.** ಅದೇ ರೀತಿಯಲ್ಲಿ, ಯೇಸು ಅವರಿಗೆ, **ಹೊಲದಲ್ಲಿರುವವನು ತನ್ನ ಹೊದಿಕೆಯನ್ನು ತೆಗೆದುಕೊಳ್ಳುವದಕ್ಕೆ ಹಿಂತಿರುಗಿ ಬಾರದೆ ಓಡಿಹೋಗಲಿ** ಎಂದು ಹೇಳಿದನು. ಹಿಂದಿನ ಕಾಲದ ಜನರು ಅನೇಕಾವರ್ತಿ ಗೋಡೆಗಳಿರುವ ಪಟ್ಟಣದೊಳಗೆ ವಾಸಿಸುತ್ತಿದ್ದರು, ಆದರೆ ಅವರು ಹಗಲಿನಲ್ಲಿ ಹೊರಗೆ ಹೊಲದಲ್ಲಿ ಕೆಲಸ ಮಾಡುತ್ತಿದ್ದರು. ಒಬ್ಬನು ತನ್ನ "ಹೊದಿಕೆಯನ್ನು" (*himation*) ಅಥವಾ "ಮೇಲಂಗಿಯನ್ನು" ಹೊಲದಲ್ಲಿ ಬಿಸಿಲಿನಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಮನೆಯಲ್ಲಿ ಬಿಟ್ಟು ಬರುತ್ತಿದ್ದನು. ಹೊದಿಕೆಯು ಚಳಿಗಾಲದಲ್ಲಿ ಪ್ರಯಾಣಮಾಡುವಾಗ ಅವಶ್ಯವಾಗಿತ್ತು ಮತ್ತು ಅದು ಆಗಾಗ್ಗೆ ಅವರು ಹೊರಗೆ ಮಲಗಿಕೊಳ್ಳುವಾಗ ಕಂಬಳಿಯಾಗಿ ಕಾರ್ಯನಿರ್ವಹಿಸುತಿತ್ತು (ಧರ್ಮೋಪದೇಶಕಾಂಡ 24:13; ಮತ್ತಾಯ 5:40). ಈ ಎಚ್ಚರಿಕೆ ಮತ್ತು ವಚನ 17ರಲ್ಲಿರುವ ಎಚ್ಚರಿಕೆ ಮೂಲ ಅವಶ್ಯಕತೆಗಳಿಗಿಂತ ಜೀವವು ಪ್ರಾಮುಖ್ಯವಾಗಿದೆ ಎಂಬುದನ್ನು ಸೂಚಿಸುತ್ತದೆ.[12] ಒಬ್ಬನು ತನ್ನ

ಹೊದಿಕೆಯನ್ನು ಮತ್ತು ಇತರ ಆಸ್ತಿಗಳನ್ನು ಪ್ರತಿಯಾಗಿ ನೀಡಬಹುದು ಆದರೆ ಜೀವವನ್ನು ಪ್ರತಿಯಾಗಿ ನೀಡಲು ಸಾಧ್ಯವಿಲ್ಲ.

**ವಚನ 19.** ಸ್ಥಳವನ್ನು ಬಿಟ್ಟು ಹೋಗುವದು ವಿಶೇಷವಾಗಿ **ಬಸುರಿಯರಿಗೂ ಮೊಲೆಕೂಸಿರುವ ಹೆಂಗಸರಿಗೂ** ಕಷ್ಟವಾಗುತ್ತದೆ. ಈ ಸ್ತ್ರೀಯರಿಗೆ ಗುಡ್ಡಗಾಡು ಪ್ರದೇಶಗಳಲ್ಲಿ ವೇಗವಾಗಿ ಪ್ರಯಾಣ ಮಾಡುವದು ಕಷ್ಟಕರ ಮತ್ತು ಅವರು ರೋಗಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚು. ಆದುದರಿಂದ ಅವರು ಬಹಳ ಸರಳವಾಗಿ ರೋಮನ್ ಸೈನ್ಯದ ವಶವಾಗುವ ಸಾಧ್ಯತೆ ಇರುತ್ತದೆ. ಗರ್ಭಿಣಿ ಸ್ತ್ರೀಯರಿಗೆ ಗರ್ಭಪಾತವಾಗುವ ಸಂಭವ ಮತ್ತು ಮೊಲೆಕೂಸಿರುವವರು ತಮ್ಮ ಕಣ್ಣೆದುರಿನಲ್ಲೇ ತಮ್ಮ ಮಕ್ಕಳು ಸಾಯುವದನ್ನು ನೋಡುವ ಸಂಭವವಿದ್ದವು.

ಪಟ್ಟಣದಲ್ಲಿ ಉಳಿದಿರುವ ಸ್ತ್ರೀಯರಲ್ಲಿ ಎದುರುಬೀಳುವ ಸಮಯ ಸಹ ಉತ್ಪನ್ನವಾಗುತಿತ್ತು. ತನ್ನ ಕ್ರೂಜಿಯ ಮಾರ್ಗದಲ್ಲಿ ಯೇಸುವು ಯೆರೂಸಲೇಮಿನ ಸ್ತ್ರೀಯರಿಗೆ, "ಬಂಜೆಯರು ಬಸುರಾಗದವರೂ ಮೊಲೆ ಕುಡಿಸದವರೂ ಧನ್ಯರು ಎಂದು ಜನರು ಹೇಳುವ ದಿವಸಗಳು ಬರುತ್ತವೆ" ಎಂದು ಹೇಳಿದನು (ಲೂಕ 23:29). ಆತನು ತನ್ನ ಮನಸ್ಸಿನಲ್ಲಿ ಮುತ್ತಿಗೆ ಮತ್ತು ಯೆರೂಸಲೇಮಿನ ನಾಶನವನ್ನು ಇಟ್ಟುಕೊಂಡಿದ್ದನು ಎನ್ನುವದರಲ್ಲಿ ಸಂಶಯವಿಲ್ಲ. ಯೋಸೆಫಸ್ಸನು ಹೀಗೆ ಬರೆಯುತ್ತಾನೆ, ಆ ದಿನಗಳಲ್ಲಿ "ಮೇಲಂತಸ್ತಿನ ಕೊಠಡಿಯು ಬರಗಾಲದಿಂದಾಗಿ ಸಾಯುತ್ತಿರುವ ಸ್ತ್ರೀಯರು ಮತ್ತು ಮಕ್ಕಳಿಂದ ತುಂಬಲ್ಪಟ್ಟಿರುತ್ತದೆ."[13] ಆತನು ಹಸಿವಿನಿಂದ ಬಳಲುತ್ತಿರುವ ಒಬ್ಬ ಸ್ತ್ರೀ ತನ್ನ ಮಗನನ್ನೇ ಕೊಂದು ತಿನ್ನುವ ಹೃದಯವಿದ್ರಾವಕ ಕಥೆಯನ್ನು ಸಹ ಹೇಳುತ್ತಾನೆ.[14]

**ವಚನ 20.** ಯೇಸು ಮುಂದುವರೆದು, **ನಿಮ್ಮ ಪಲಾಯನವು ಚಳಿಗಾಲದಲ್ಲಿಯಾಗಲಿ ಸಬ್ಬತ್‌ದಿನದಲ್ಲಿಯಾಗಲಿ ಆಗಬಾರದೆಂದು ಪ್ರಾರ್ಥನೆಮಾಡಿರಿ.** ಚಳಿಗಾಲದಲ್ಲಿ ಪ್ರಯಾಣ ಅತೀ ತಂಪಾದ ವಾತಾವರಣದಿಂದಾಗಿ ಕಷ್ಟಕರವಾಗುತ್ತದೆ. ಒಬ್ಬ ಯೆಹೂದಿ ಗುರುಗಳ ಹೇಳಿಕೆ ಹೀಗಿದೆ. Tammuz (June/July)ನಲ್ಲಿ ಉಷ್ಣತೆ ಹೆಚ್ಚಾಗಿರುತ್ತದೆ ಮತ್ತು Tebeth (December/January) ತಂಪಾಗಿರುತ್ತದೆ, ಮತ್ತು ಆದರೆ Nisan (March/April)ನಲ್ಲಿ ಪ್ರಯಾಣ ಮಾಡಲು ಅನೂಕೂಲಕರವಾದ ತಾಪಾಮಾನ ಇರುತ್ತದೆ.[15] ತಂಪಾದ ತಾಪಮಾನದಿಂದಾಚೆಗೆ, ಪಾಲೇಸ್ತೀನದಲ್ಲಿ ಚಳಿಗಾಲದಲ್ಲಿ ಒಮ್ಮಿದೊಮ್ಮೆಲೇ ಮಳೆ ಮತ್ತು ಪ್ರವಾಹಗಳು ಉಂಟಾಗುತ್ತವೆ. ಕಷ್ಟದಿಂದ ದಾಟುವ (ಒಣಗಿದ ನದಿ ಬದಿಗಳು) ನೀರಿನಿಂದ ತುಂಬಲ್ಪಡುತ್ತವೆ, ಮತ್ತು ಯೋರ್ದಾನ ಹೊಳೆಯ ಮಟ್ಟ ಪ್ರವಾಹದ ಹಂತಕ್ಕೆ ಏರುತ್ತದೆ. ಕೆಲವೊಂದು ರಸ್ತೆಗಳು ಪ್ರಯಾಣ ಮಾಡುವದಕ್ಕೆ ಅತ್ಯಂತ ಕಷ್ಟಕರವಾಗಿರುತ್ತದೆ ಯಾಕೆಂದರೆ ಬಂಡೆಗಳು ಮತ್ತು ಅದರ ಮೇಲೆ ಮುಚ್ಚಿರುವ ಮಣ್ಣು ಬೆಟ್ಟದ ಮೇಲಿನಿಂದ ಹರಿದು ನೀರಿನ ಸೆಳೆವಿನಿಂದಾಗಿ ತೊಳೆಯಲ್ಪಟ್ಟಿರುತ್ತವೆ.[16]

ಮತ್ತಾಯನ ಸುವಾರ್ತೆ, ಯೆಹೂದ್ಯ ಕ್ರೈಸ್ತರನ್ನು ಸಂಬೋಧಿಸುವ ಏಕೈಕ ಸುವಾರ್ತೆಯಾಗಿದೆ. ಆತನು ಸಬ್ಬತ್ ದಿನದಲ್ಲಿ ಪ್ರಯಾಣ ಮಾಡುವ ಕಷ್ಟದ ಬಗ್ಗೆ ಸೇರಿಸುತ್ತಾನೆ. ಯೆರೂಸಲೇಮಿನಲ್ಲಿರುವ ಅನೇಕ ಕ್ರೈಸ್ತರು ಈ ದಿನದಲ್ಲಿ ಪ್ರಯಾಣ ಮಾಡಲು ಇಷ್ಟಪಡುವದಿಲ್ಲ ಯಾಕೆಂದರೆ ಅವರು ಇನ್ನೂ ಧರ್ಮಶಾಸ್ತ್ರವನ್ನು ಅನುಸರಿಸುವವರಾಗಿದ್ದಾರೆ (ಅಪೊಸ್ತಲರ ಕೃತ್ಯಗಳು 15:1; 21:17, 20). ಸಂಪ್ರದಾಯಿಕವಾಗಿ, ಯೆಹೂದ್ಯರು ಸಬ್ಬತ್ ದಿನದಂದು 3/4 ಮೈಲುಗಳಷ್ಟು ನಡೆಯುವದನ್ನು ನಿಷೇಧಿಸಿದ್ದರು (ಅಪೊಸ್ತಲರ ಕೃತ್ಯಗಳು 1:12).[17] ಕೆಲವರು ಹೀಗೆ ಸಲಹೆನೀಡುತ್ತಾರೆ ಕ್ರೈಸ್ತರಿಗೆ ಸಬ್ಬತ್‌ದಿನದಲ್ಲಿ ಪಟ್ಟಣದಿಂದ ಹೊರಗೆ ಹೋಗುವದು ಕಷ್ಟಕರವಾಗಿತ್ತು, ನೆಹಮೀಯನ ದಿನದಲ್ಲಿದ್ದಂತೆ ಒಂದು ವೇಳೆ ಪಟ್ಟಣದ ಬಾಗಿಲುಗಳು ಮುಚ್ಚಲಾಗಿದ್ದಲ್ಲಿ (ನೆಹಮೀಯ 13:19-22). ವ್ಯಾಪಾರಸ್ಥರು ಸಬ್ಬತ್ ದಿನದಂದು ಅಂಗಡಿಗಳನ್ನು ಮುಚ್ಚುತ್ತಿದ್ದರಿಂದ, ವಿಶ್ವಾಸಿಗಳು ರೊಟ್ಟಿ ಅಥವಾ ಇನ್ನಿತರ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳಲು ಆಗುತ್ತಿರಲಿಲ್ಲ. ಅಷ್ಟು ಮಾತ್ರವಲ್ಲದೆ,

ಯೆರೂಸಲೇಮಿನಲ್ಲಿದ್ದ ಮತ್ತು ಇನ್ನಿತರ ಸ್ಥಳಗಳಲ್ಲಿದ್ದ ಅವಿಶ್ವಾಸಿಗಳಾದ ಯೆಹೂದ್ಯರು ಬಹುಶಃ ಅವರಿಗೆ ಹಿಂಸೆಯನ್ನು ನೀಡುತ್ತಿದ್ದರು.

**ವಚನ 21.** ಯೇಸು **ಮಹಾ ಸಂಕಟದ** ಕುರಿತಾಗಿ ಎಚ್ಚರಿಸುತ್ತಾನೆ. ಇದು ಭೂಲೋಕದಲ್ಲಿ "ಅಂತ್ಯದ ದಿನಗಳಲ್ಲಿ" ಸಂಭವಿಸುವ ಭವಿಷ್ಯದ ಅವಧಿಯನ್ನು ಉಲ್ಲೇಖಿಸುವದಿಲ್ಲ. ಬದಲಾಗಿ, ಇದು ರೋಮಾ ಅಧಿಪತಿ Titusನು ಮುತ್ತಿಗೆ ಹಾಕಿದ ಪರಿಣಾಮವಾಗಿ ಮತ್ತು ನಂತರದ ಅಹಿತಕರ ಪರಿಣಾಮದಿಂದಾಗಿ ಪಟ್ಟಣದ ಮೇಲೆ ಆಗುವ ಅಂತಿಮ ಆಕ್ರಮಣವನ್ನು ಒಳಗೊಂಡು ಯೆರೂಸಲೇಮಿನ ನಿವಾಸಿಗಳ ಮೇಲೆ ಬರುವ ಮಾಹಾ ಸಂಕಟವನ್ನು ಪ್ರಸ್ತಾಪಿಸುತ್ತದೆ.

ಕರ್ತನು ಈ ನಾಶನವನ್ನು ಹೀಗೆ ವರ್ಣಿಸುತ್ತಾನೆ, **ಅಂಥ ಸಂಕಟವು ಲೋಕ ಹುಟ್ಟಿದ್ದು ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ.** ಯೆರೂಸಲೇಮಿನ ನಾಶನ ನೋಹನ ಕಾಲದಲ್ಲಿ ಆದ ಪ್ರವಾಹಕ್ಕಿಂತ ಅಥವಾ ಮೋಶೆಯ ಕಾಲದಲ್ಲಿ ಬಂದ ಹತ್ತು ಬಾಧೆಗಳಿಗಿಂತ ಕೆಟ್ಟದ್ದಾಗಿತ್ತೋ? ಸಂಕಟವು ಭವಿಷ್ಯತ್ತಿನಲ್ಲಿ ನಡೆಯಲಿಕ್ಕಿರುವ ಯುದ್ಧಕ್ಕಿಂತ ದೊಡ್ಡದಾಗಿತ್ತೋ? ಇಲ್ಲಿ ಉಪಯೋಗಿಸಿರುವ ಭಾಷೆ ಬಹುಶಃ ಇದು ಅತಿಶಯೋಕ್ತಿಯಾಗಿರಬಹುದು (ನೋಡಿರಿ ಯೆರೆಮೀಯ 30:7; ದಾನಿಯೇಲನು 12:1; ಯೋವೇಲ 2:2). ಈ ಸಲಹೆಯು ಯೆರೂಸಲೇಮಿನ ನಾಶನವನ್ನು ಕಡಿಮೆಗೊಳಿಸುವ ಉದ್ದೇಶವನ್ನು ಹೊಂದಿಲ್ಲ, ಇದು ನ್ಯಾಯತೀರ್ಪಿನ ದಿನದ ಮುನ್‌ಸೂಚನೆಯಾಗಿದೆ.

Josephus ರವರು ಈ ಸಂಗತಿಗಳಿಗೆ ದೃಶ್ಯ ಸಾಕ್ಷಿಯಾಗಿದ್ದಾನೆ, ಈ ರೀತಿಯಾದ ಪದಗಳಲ್ಲಿ ನಾಶನದ ಕುರಿತು ಮಾತನಾಡುತ್ತಾನೆ:

> ಅದು ಈ ರೀತಿಯಾಗಿ, ನನಗೆ ತೋರಿಬರುತ್ತದೆ, ಲೋಕದ ಪ್ರಾರಂಭದಿಂದ ಎಲ್ಲಾ ಮನುಷ್ಯರ ದುರ್ದೆಶೆಯನ್ನು ಒಂದು ವೇಳೆ ಈ ಯೆಹೂದ್ಯರೊಂದಿಗೆ ಹೋಲಿಸಿದ್ದಲ್ಲಿ ಅವು ಹೇಗೆ ತೋರಿಬರುತ್ತವೆಯೋ ಅಷ್ಟು ಗಣನೀಯವಾಗಿ ಇಲ್ಲ.[18]

> ಅಲ್ಲದೇ ಇನ್ನಾವ ಪಟ್ಟಣವೂ ಎಂದಿಗೂ ಇಂಥಹಾ ಸಂಕಟಗಳನ್ನು ಅನುಭವಿಸಲಿಲ್ಲ ... ಲೋಕದ ಪ್ರಾರಂಭದಿಂದ.[19]

> ಅದರಂತೆ ಅಲ್ಲಿದ್ದ ಜನಸಮೂಹವು ಲೋಕದ ಮೇಲೆ ಮನುಷ್ಯನು ಅಥವಾ ದೇವರು ಬರಮಾಡಿದ ಎಲ್ಲಾ ನಾಶನಕ್ಕಿಂತ ಅತೀ ಹೆಚ್ಚಾಗಿ ನಾಶವಾದರು.[20]

ಮುತ್ತಿಗೆ ಮತ್ತು ಯೆರೂಸಲೇಮಿನ ನಾಶನದ ಸಮಯದಲ್ಲಿ ಸುಮಾರು 1, 100, 000 ಜನರು ಮರಣಹೊಂದಿದರು, ಮತ್ತು 97, 000 ಜನರನ್ನು ಸೆರೆಯಾಗಿ ಹಿಡಿಯಲ್ಪಟ್ಟರು ಎಂದು ಹೇಳುತ್ತಾನೆ. ಇವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಸ್ಕ ಹಬ್ಬಕ್ಕಾಗಿ ಬಂದಂತ ಯೆಹೂದ್ಯ ಯಾತ್ರಿಕರಾಗಿದ್ದರು, ಉಳಿದವರು ಯೆರೂಸಲೇಮಿನ ನಿವಾಸಿಗಳಾಗಿದ್ದರು.[21]

**ವಚನ 22.** ಯೇಸು ಹೇಳಿದ್ದು **ಇನ್ನು ಮೇಲೆಯೂ ಆಗುವದಿಲ್ಲ. [ಕರ್ತನು] ಆ ದಿನಗಳನ್ನು ಕಡಿಮೆಮಾಡದಿದ್ದರೆ ಒಂದು ನರಪ್ರಾಣಿಯಾದರೂ ಉಳಿಯದು.** ರೋಮನ್ನರು ಯೆರೂಸಲೇಮನ್ನು ಕೆಲವು ಸಮಯ ಸುತ್ತುವರೆದಾಗ ಆಕ್ರಮಣ April ನಿಂದ September ವರೆಗೆ ಮಾತ್ರ ಮುಂದುವರೆಯಿತು. ಈ ಮುತ್ತಿಗೆಯು **ಆದುಕೊಂಡವರಿಗೋಸ್ಕರ** ಕಡಿಮೆ ಮಾಡಲ್ಪಟ್ಟಿತು. "ಆದುಕೊಂಡವರು" ಕ್ರೈಸ್ತರನ್ನು ಉಲ್ಲೇಖಿಸುತ್ತದೆ (ನೋಡಿರಿ ವ್ಯಾಖ್ಯಾನ 22:14). Leon Morris ರವರು ಈ ವಿಮರ್ಶೆಯನ್ನು ಮಾಡುತ್ತಾರೆ: "ದೇವಜನರು ತಮ್ಮ ಸುತ್ತಲು ಇರುವ ಜನರಿಗೆ ಸ್ವಲ್ಪ ಮಟ್ಟಿಗೆ ಕರುಣೆಯನ್ನು ತರುತ್ತಾರೆ; ಅದೇ ಸಮಯದಲ್ಲಿ ಪಶ್ಚಾತ್ತಾಪ ಪಡದೇಯಿರುವವರು ಅಂತಿಮ ರಕ್ಷಣೆಯಲ್ಲಿ ಪಾಲು ತೆಗೆದುಕೊಳ್ಳುವದಿಲ್ಲ, ಆದಾಗ್ಯೂ ಅವರಿಗೆ ಸ್ವಲ್ಪ ಮಟ್ಟಿಗೆ ಒಳ್ಳೇದಾಗುತ್ತದೆ ಯಾಕೆಂದರೆ ಅವರ ಸಮಾಜದಲ್ಲಿರುವ

ಆದುಕೊಂಡವ ಪ್ರಸನ್ನತೆಯಿಂದಾಗಿದೆ.''[22] ಆದಿ ಸಭೆಯ ಇತಿಹಾಸ ತಜ್ಞರು ಈ ನಾಶನದಲ್ಲಿ ಒಬ್ಬ ಕ್ರೈಸ್ತರೂ ಮರಣ ಹೊಂದಲಿಲ್ಲ ಯಾಕೆಂದರೆ ಅವರು ಯೇಸುವಿನ ತಜ್ಞರು ಈ ನಾಶನದಲ್ಲಿ ಒಬ್ಬ ಕ್ರೈಸ್ತರೂ ಮರಣ ಹೊಂದಲಿಲ್ಲ ಯಾಕೆಂದರೆ ಅವರು ಯೇಸುವಿನ ಸೂಚನೆಗಳನ್ನು ತಿಳಿದುಕೊಂಡಿದ್ದರು ಮತ್ತು ಅವುಗಳಿಗೆ ವಿಧೇಯರಾಗಿದ್ದರು.[23]

## "ಸುಳ್ಳು ಕ್ರಿಸ್ತರನ್ನು ನಂಬಬೇಡಿರಿ" (24:23-28)

**23ಆಗ ಯಾರಾದರೂ ನಿಮಗೆ - ಇಗೋ ಕ್ರಿಸ್ತನು ಇಲ್ಲಿದ್ದಾನೆ, ಅಗೋ ಅಲ್ಲಿದ್ದಾನೆ ಎಂದು ಹೇಳಿದರೆ ನಂಬಬೇಡಿಲಿ. 24ಸುಳ್ಳುಕ್ರಿಸ್ತರೂ ಸುಳ್ಳುಪ್ರವಾದಿಗಳೂ ಎದ್ದು ಸಾಧ್ಯವಾದರೆ ದೇವರಾದುಕೊಂಡವರನ್ನು ಸಹ ಮೋಸಗೊಳಿಸುವದಕ್ಕೋಸ್ಕರ ದೊಡ್ಡ ದೊಡ್ಡ ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ಮಾಡಿ ತೋರಿಸುವರು. 25ಇಗೋ ನಿಮಗೆ ಮುಂದಾಗಿ ಹೇಳಿದ್ದೇನೆ. 26ಆದಕಾರಣ ಯಾರಾದರೂ ನಿಮಗೆ - ಅಗೋ ಕ್ರಿಸ್ತನು ಅಡವಿಯಲ್ಲಿ ಇದ್ದಾನೆಂದು ಹೇಳಿದರೆ ಹೊರಟುಹೋಗಬೇಡಿರಿ; ಇಗೋ ಕೋಣೆಗಳಲ್ಲಿದ್ದಾನೆಂದು ಹೇಳಿದರೆ ನಂಬಬೇಡಿರಿ. 27ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದ ವರೆಗೂ ಕಾಣಿಸುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವದು. 28ಹೆಣ ಬಿದ್ದಲ್ಲಿ ಹದ್ದುಗಳು ಕೂಡುವವು.**

**ವಚನ 23.** ಯೆರೂಸಲೇಮಿನ ನಾಶನದ ಸಮಯದಲ್ಲಿ ತಾನು ತಿರುಗಿ ಬರುವದಿಲ್ಲವೆಂಬುದನ್ನು ಕರ್ತನು ಸ್ಪಷ್ಟಪಡಿಸಿದನು. ಆ ಸಮಯದಲ್ಲಿ ಮೆಸ್ಸೀಯನೆಂದು ನಟಿಸುವವರು ಎದ್ದೇಳುವರು, ಯೆಹೂದ್ಯರಿಗೆ ಬಿಡುಗಡೆಯನ್ನು ನೀಡುತ್ತೇವೆ ಎಂದು ಹೇಳುವರು. ಆದಾಗ್ಯೂ, ಯೇಸುವಿನ ಹಿಂಬಾಲಕರು ಇವರ ಕುರಿತಾಗಿ ವದಂತಿಗಳನ್ನು ನಂಬಬಾರದು. ಜನರು, **ಇಗೋ ಕ್ರಿಸ್ತನು ಇಲ್ಲಿದ್ದಾನೆ,** ಅಥವಾ **ಅಗೋ ಅಲ್ಲಿದ್ದಾನೆ** ಎಂದು ಹೇಳಬಹುದು. ಈ ವದಂತಿಗಳು ಸುಳ್ಳು ನಿರೀಕ್ಷೆಯನ್ನು ಆಧರಿಸಿವೆ ನೈಜತೆಯನ್ನಲ್ಲ. ಯೇಸು ತನ್ನ ಶಿಷ್ಯರಿಗೆ ಇಂಥಹಾ ಸುಳ್ಳುಗಳಿಗೆ ಮಾನ್ಯತೆ ನೀಡಬಾರದೆಂದು ಹೇಳುತ್ತಾನೆ. **ಆತನನ್ನು ನಂಬಬೇಡಿರಿ** ಎಂಬ ಆಜ್ಞೆಯು ವಚನ 26ರಲ್ಲಿ ಪುನರಾವರ್ತಿಸಲಾಗಿದೆ, ಅದರ ಅರ್ಥ, "ಅವರನ್ನು ನಂಬಬೇಡಿರಿ."[9]

**ವಚನ 24. ಸುಳ್ಳುಕ್ರಿಸ್ತರೂ ಸುಳ್ಳುಪ್ರವಾದಿಗಳೂ** ಬಂದು **ದೊಡ್ಡ ದೊಡ್ಡ ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ಮಾಡಿ ತೋರಿಸುವರು.** ಇವು ಜನರನ್ನು ಮೋಸಗೊಳಿಸುವದಕ್ಕಾಗಿ ಮಾಡುವ ಸುಳ್ಳು ಅದ್ಭುತಗಳು, ಸಿಮೋನನೆಂಬ ಮಂತ್ರವಾದಿಯು ಸಮಾರ್ಯದವರ ಮಧ್ಯದಲ್ಲಿ ಮಾಡಿದ ರೀತಿಯಲ್ಲಿಯೇ (ಅಪೊಸ್ತಲರ ಕೃತ್ಯಗಳು 8:9-11), ಈ ಸೂಚಕಕಾರ್ಯಗಳು ಮತ್ತು ಅದ್ಭುತಗಳು ಎಷ್ಟು ಪ್ರಚೋದಕವಾಗಿರುತ್ತವೆಂದರೆ ಅವು ದೇವರಾದುಕೊಂಡವನ್ನು, ಅಂದರೆ ... ಕ್ರೈಸ್ತರನ್ನು **ಮೋಸ ಗೊಳಿಸುವದಕ್ಕೋಸ್ಕರ** ಮಾಡುವಂಥವುಗಳಾಗಿವೆ.

**ವಚನ 25.** ಯೇಸು ನಿಶ್ಚಯವಾಗಿ ವಾಗ್ದಾನ ಮಾಡುತ್ತಾನೆ, **ಇಗೋ ನಿಮಗೆ ಮುಂದಾಗಿ ಹೇಳಿದ್ದೇನೆ.** ಆತನು ಆಗಾಗ್ಗೆ, ತನ್ನ ಶಿಷ್ಯರನ್ನು ಸಿದ್ಧಪಡಿಸುವದಕ್ಕಾಗಿ ಬರಲಿಕ್ಕಿರುವ ಅಪಾಯಗಳ ಕುರಿತಾಗಿ ಅವರನ್ನು ಎಚ್ಚರಿಸುತ್ತಾನೆ (10:16-39; 16:21; 17:22, 23; 20:17-19; 26:1, 2). ಅವರು ತನಗೆ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿಯೂ ನಂಬಿಗಸ್ತರಾಗಿರಬೇಕೆಂದು ಆತನು ಹೀಗೆ ಮಾಡಿದನು.

**ವಚನ 26.** ಯೇಸು ತನ್ನ ಶಿಷ್ಯರಿಗೆ ಕ್ರಿಸ್ತನು **ಅಡವಿಯಲ್ಲಿ ಇದ್ದಾನೆಂದು** ಎಂಬ ವರದಿಗೆ ಮನ್ನಣೆಯನ್ನು ನೀಡಬಾರದೆಂದು ಸೂಚಿಸುತ್ತಾನೆ. Josephus ಪ್ರಕಾರ, ಅನೇಕ ಸುಳ್ಳು ಪ್ರವಾದಿಗಳು ಯೆರೂಸಲೇಮ (ಪಾಲೇಸ್ತೀನದಲ್ಲಿ) ಪಟ್ಟಣವು ನಾಶವಾಗುವ ಎರಡು ದಶಕ

ಪೂರ್ವದಲ್ಲಿ ಇದ್ದರು. ಅವರು ಜನರನ್ನು ತಮ್ಮ ಹಿಂದೆ ಅಡವಿಗೆ ಬರಬೇಕೆಂದು ಪ್ರಚೋದಿಸುತ್ತಿದ್ದರು, ಅಲ್ಲಿ ಅವರು ಸೂಚಕ ಕಾರ್ಯಗಳನ್ನು ಅದ್ಭುತಗಳನ್ನು ಮಾಡಿ ಅವು ದೇವರಿಂದ ಆದವುಗಳು ಎಂದು ಹೇಳಿಕೊಳ್ಳುತ್ತಿದ್ದರು ಎಂದು ಆತನು ಬರೆಯುತ್ತಾನೆ.[24]

ಜನರಲ್ಲಿ ಮೆಸ್ಸೀಯನು ಅಡವಿಯಲ್ಲಿ ಬರುತ್ತಾನೆ ಎಂಬ ಒಂದು ಸಾಮಾನ್ಯವಾದ ನಿರೀಕ್ಷೆಯಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 21:38). ಈ ಜನಪ್ರಿಯ ನಂಬಿಕೆ ಯಾಕೆ ಅಷ್ಟೊಂದು ಜನರು ಸ್ನಾನಿಕನಾದ ಯೋಹಾನನ ಹಿಂದೆ ಹೋದರು ಮತ್ತು ಯಾಕೆ ಯೆಹೂದಿ ನಾಯಕರು ಆತನು ಕ್ರಿಸ್ತನಾಗಿದ್ದಾನೋ ಎಂಬುದರ ಕುರಿತು ಪ್ರಶ್ನಿಸಿದರು ಎಂಬುದನ್ನು ವಿವರಿಸುತ್ತದೆ (3:1, 5; 11:7; ಯೋಹಾನ 1:19-28). Richard A. Horsley ಮತ್ತು John S. Hanson ಅವರು ಹೀಗೆ ಬರೆದಿದ್ದಾರೆ:

> ಬಹಳ ಸಂಖ್ಯೆಯಲ್ಲಿ ಜನರು ಸನ್ನಿಹಿತವಾಗಿರುವ ದೇವರ ಕಾರ್ಯಗಳ ಕುರಿತು ಪ್ರೇರೇಪಿಸಲ್ಪಟ್ಟವರು ಮತ್ತು ಮನದಟ್ಟುಮಾಡಿಕೊಂಡವರು ಆಗಿದ್ದರು, ತಮ್ಮ ಕೆಲಸಗಳನ್ನು ಮನೆಗಳನ್ನು ಮತ್ತು ಹಳ್ಳಿಗಳನ್ನು ತೊರೆದು ಅಡವಿಯೊಳಗೆ ತಮ್ಮ ದೈವಿವರ್ಚಸ್ಸಿನ ನಾಯಕರನ್ನು ಹಿಂಬಾಲಿಸಿದರು. ಅವರು ತಮ್ಮ ಪವಿತ್ರ ಸಂಪ್ರದಾಯದ ಮೂಲಕ ಅಡವಿಯಲ್ಲಿ ದೇವರು ವಿಮೋಚನೆಯ ಮುಂಚಿತ ಸಮಯದಲ್ಲಿ ಸೂಚಕಕಾರ್ಯಗಳನ್ನು ಮತ್ತು ಅದ್ಭುತಕಾರ್ಯಗಳನ್ನು ತೋರಿಸಿದ್ದಾನೆ ಎಂಬುದನ್ನು ತಿಳಿದಿದ್ದರು ಮತ್ತು ಅಡವಿಯು ಶುದ್ಧಿಕರಿಸುವ, ಸಿದ್ಧಪಡಿಸುವ ಮತ್ತು ನೂತನ ಪಡಿಸುವ ಸ್ಥಳವೆಂದು ತಿಳಿದಿದ್ದರು.[25]

ಯೆಹೂದ್ಯ ಗುರುಗಳ ಸಾಹಿತ್ಯದಲ್ಲಿ, ಮೆಸ್ಸೀಯನು ಎರಡನೆಯ ಮೋಶೆಯನ್ನಾಗಿ ಆತನು ಯೂದಾಯದ ಅಡವಿಯಲ್ಲಿ ಅಥವಾ ಯೋರ್ದಾನ ಅಡವಿಯಲ್ಲಿ ಕಾಣಿಸುವನೆಂದು ಹೇಳಲಾಗಿತ್ತು.[26]

ಯೇಸು ತನ್ನ ಹಿಂಬಾಲಕರಿಗೆ, **ಹೊರಟು ಹೋಗಬೇಡಿರಿ.** ಆತನು ಅವರಿಗೆ, "ಸುಳ್ಳು ಮೆಸ್ಸೀಯನನ್ನು ಹಿಂಬಾಲಿಸಲು ಅಡವಿಯೊಳಕ್ಕೆ ಹೊರಟು ಹೋಗಬೇಡಿರಿ" ಎಂದು ಹೇಳುತ್ತಿದ್ದಾನೆ. ಇಂಥಹದ್ದೆ ಪಠ್ಯದಲ್ಲಿ ಯೇಸು, "ಹೊರಟು ಹೋಗಬೇಡಿರಿ, ಮತ್ತು ಅವರನ್ನು ಹಿಂಬಾಲಿಸಲು ಬೇಡಿರಿ" ಎಂದನು (ಲೂಕ 17:23).

ಹೀಗೆ ನಟಿಸುವವರು ಅಡವಿಯೊಟ್ಟಿಗೆ, ಒಳಗಿನ **ಇಗೋ ಕೋಣೆಗಳಲ್ಲಿದ್ದಾನೆಂದು ಎಚ್ಚರಿಸಿದನೆಂದು** ತಿಳಿಸಿದನು. ಒಳಕೋಣೆಗಳು ವೈಯಕ್ತಿಕವಾಗಿ ಮತ್ತು ಸುರಕ್ಷಿತವಾದ ಮನೆಯ ಒಳಗೆ ಇರುವ ಸ್ಥಳಗಳು ಇಲ್ಲಿ ಒಬ್ಬನು ಸಾರ್ವಜನಿಕರಿಗೆ ಮರೆಯಾಗಿ ಇರಬಹುದು. ಅದೇ ಗ್ರೀಕ್ ಪದ *tameion* ಮತ್ತಾಯನ ಸುವಾರ್ತೆಯಲ್ಲಿ ಈ ಮೊದಲೇ ಕಾಣಿಸಿಕೊಳ್ಳುತ್ತದೆ ತಂದೆಯೊಂದಿಗೆ ಏಕಾಂತದಲ್ಲಿ ರಹಸ್ಯವಾಗಿ ಪ್ರಾರ್ಥನೆ ಮಾಡುವ ಸ್ಥಳ (ನೋಡಿರಿ ವ್ಯಾಖ್ಯಾನ 6:6).

**ವಚನ 27.** ಸುಳ್ಳು ಪ್ರವಾದಿಗಳ ಮೋಸಕರವಾದ ಸೂಚಕ ಕಾರ್ಯಗಳು ಮತ್ತು ಅದ್ಭುತಗಳಿಗೆ ಭಿನ್ನವಾಗಿ, ಯೇಸು ತನ್ನ ಎರಡನೆಯ ಬರೋಣದ ಸತ್ಯವಾದ ಮತ್ತು ಸಜೀವವಾದ ವರ್ಣನೆಯನ್ನು ನೀಡುತ್ತಾನೆ: **ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವದು.** ಆತನ "ಬರೋಣ" (*parousia*) ಕತ್ತಲೆಯ ಸ್ಥಳದಲ್ಲಿ ಆಗಲಿ ರಹಸ್ಯ ಸ್ಥಳದಲ್ಲಿ ಆಗಲಿ ಆಗುವದಿಲ್ಲ ಆದರೆ ಅದು ಎಲ್ಲರಿಗೂ ಸ್ಪಷ್ಟವಾಗಿ ಕಾಣುವದು. ಮಿಂಚು ಮಿಂಚುತ್ತಾ ಆಕಾಶದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೂ ಹೇಗೆ ಹೊಳೆಯುವದೋ ಹಾಗೆಯೋ ಮನುಷ್ಯಕುಮಾರನು ತನ್ನ ದಿನದಲ್ಲಿರುವನು (ಲೂಕ 17:24). ಯೋಹಾನನು ಬರೆಯತ್ತಾನೆ, "ಇಗೋ, ಆತನು ಮೇಘಗಳೊಂದಿಗೆ ಬರುತ್ತಾನೆ, ಎಲ್ಲರ ಕಣ್ಣುಗಳು ಆತನನ್ನು

ಕಾಣುವವು'' (ಪ್ರಕಟಣೆ 1:7). ಈ ಹೇಳಿಕೆಯು ಮತ್ತಾಯ 24:30ರಲ್ಲಿ ಯೇಸುವಿನ ಪ್ರವಾದನೆಗೆ ಹೋಲಿಕೆಯಾಗಿದೆ.

**ವಚನ 28.** ಬಹಳ ಮಟ್ಟಿಗೆ ಯೇಸು ತನ್ನ ಎರಡನೆಯ ಬರೋಣದ ಸ್ಪಷ್ಟವಾದ ಸ್ವರೂಪವನ್ನು ಪ್ರಾಚೀನ ನಾಣ್ಣುಡಿ ಹೇಳಿದಂತೆ: **ಹೆಣ ಬಿದ್ದಲ್ಲಿ ಹದ್ದುಗಳು ಕೂಡುವವು** (ಲೂಕ 17:37 ನೋಡಿರಿ) ಎಂದು ಹೇಳುತ್ತಾನೆ. ಇಂತಹದ್ದೇ ಹೇಳಿಕೆಯು ಹದ್ದು ಮತ್ತು ರಣ ಹದ್ದುಗಳ ಕುರಿತು ಯೋಬ 39:30ರಲ್ಲಿ ಕಂಡುಬರುತ್ತದೆ: "ಹತರಿದ್ದಲ್ಲಿ ಹದ್ದು" ಇದಕ್ಕಿರುವ ಇಬ್ರಿಯ ಪದ *nesher* ಮತ್ತು ಗ್ರೀಕ್ ಪದ *aetos* ಈ ಎರಡನ್ನು "ಹದ್ದು" ಅಥವಾ "ರಣಹದ್ದು" ಎಂದು ಅನುವಾದಿಸಬಹುದು.

"ಶವ'' ಎಂಬ ಪದಕ್ಕೆ ಗ್ರೀಕ್ ಪದ (*ptōma*) ದಂಗೆಯಲ್ಲಿ ಕೊಂದವನು ಎಂದು ಸೂಚಿಸುತ್ತದೆ (ನೋಡಿರಿ 14:12ರ ಮೇಲಿನ ವ್ಯಾಖ್ಯಾನ). Keener ರವರ ಪ್ರಾಚೀನ ಪರ್ಯವು ಯುದ್ಧ ಭೂಮಿಯಲ್ಲಿ ಆಗಾಗ್ಗೆ ಬೀಳುವ ಶವಗಳ ಭಯಂಕರವಾದ ಸ್ಥಿತಿಯನ್ನು, ಅವುಗಳನ್ನು ಪಕ್ಷಿಗಳು ಮತ್ತು ನಾಯಿಗಳು ತಿನ್ನುತ್ತಿದ್ದವು[27] ಎಂಬುದನ್ನು ಮೇಲಿಂದ ಮೇಲೆ ಉಲ್ಲೇಖಿಸುತ್ತದೆ. Donald A. Hagner ರವರು ವಚನ 28 ರಲ್ಲಿರುವ ಅರ್ಥವನ್ನು ಈ ರೀತಿಯಲ್ಲಿ ಸಂಕ್ಷಿಪ್ತಗೊಳಿಸುತ್ತಾರೆ: "ಹೀಗೆ ಹದ್ದುಗಳು ಎಲ್ಲಿ ಸೇರಿಬರುತ್ತವೆಯೋ ಅಲ್ಲಿ ಶವವಿರುತ್ತದೆ ಎಂಬುದು ನಿಮಗೆ ಖಂಡಿತವಾಗಿ ಗೊತ್ತಿದೆ. ಇದರಿಂದಾಗಿ ನೀವು ಮನುಷ್ಯಕುಮಾರನ ಬರುವಿಕೆಯನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗುವದಿಲ್ಲ."[28]

ವಚನ 28ನ್ನು ಕ್ರಿಸ್ತನ ಎರಡನೇ ಬರೋಣಕ್ಕೆ ಹೋಲಿಸುವದಕ್ಕೆ ಬದಲಾಗಿ, ಕೆಲವು ಪಂಡಿತರು ಇದನ್ನು ಅನ್ಯೋಕ್ತಿಯಾಗಿ ಉಪಯೋಗಿಸಿದ್ದಾನೆ. ಅವರು "ಶವ'' ತನ್ನ ಅಂತಿಮ ಪ್ರಸನವೇದನೆಯಲ್ಲಿ ನಾಶವಾಗಿ ಹೋಗುತ್ತಿರುವ ಇಸ್ರಾಯೇಲ ಜನಾಂಗವನ್ನು ಸೂಚಿಸುತ್ತದೆ ಎಂಬುದನ್ನು ನಂಬುತ್ತಾರೆ. ಆದರೂ, "ರಣಹದ್ದುಗಳು'' ಏನನ್ನು ಪ್ರತಿನಿಧಿಸುತ್ತವೆ ಎನ್ನುವದಕ್ಕೆ ಒಂದೇ ಅಭಿಪ್ರಾಯಗಳಿಲ್ಲ. ಅವು ಸುಳ್ಳು ಪ್ರವಾದಿಗಳನ್ನು ಮತ್ತು ಸುಳ್ಳು ಕ್ರಿಸ್ತರನ್ನು ಯೆರೂಸಲೇಮಿನ ಕೊನೆಯ ಗಳಿಗೆಯಲ್ಲಿ ಸಂಕಟದಲ್ಲಿ ಬಿದ್ದ ಸಾಮಾನ್ಯ ಜನರನ್ನು ಬಲಿತೆಗೆದುಕೊಳ್ಳುತ್ತಾರೆ. ಇನ್ನೊಂದು ಆಯ್ಕೆ ಎಂದರೆ, ಬದಲಿ ಅನುವಾದವನ್ನು "ಹದ್ದು'' ಎಂದು ಉಪಯೋಗಿಸುವದರ ಮೂಲಕ ಈ ಪಕ್ಷಿಗಳು ಹದ್ದುಗಳಂತೆ ಪ್ರವೇಶ ಮಾಡಿ ರೋಮನ್ ಸೈನ್ಯಕ್ಕೆ ಸಂಕೇತವಾಗಿವೆಯೋ. ಕೊನೆಗೆ ಸಾಧ್ಯತೆ, ಈ ಕೊಳ್ಳೆ ಹೊಡೆಯುವವರು ಸುತ್ತಲು ಇರುವ ಕ್ಷೇತ್ರ ದಲ್ಲಿ ಇರುವ ಜನರು, ಯೆರೂಸಲೇಮಿನ ನಾಶನದ ನಂತರ ಲೂಟಿ ಮಾಡುವದಕ್ಕಾಗಿ ಅದರಲ್ಲಿ ಭಾಗವಹಿಸಿದವರು ಎಂದು ಪ್ರಸ್ತಾಪಿಸುತ್ತಾನೆ. ಅದೇ ಸಮಯದಲ್ಲಿ ಈ ವಿವರಣೆ ಅಸಾಧ್ಯವೇನಲ್ಲ, ಆದರೆ ಅಸಂಭವನೀಯ.

## "ಮನುಷ್ಯಕುಮಾರನನ್ನು ಸೂಚಿಸುವ ಗುರುತು ಕಾಣಿಸುವದು'' (24:29-31)

**29ಆ ದಿನಗಳ ಸಂಕಟವು ತೀರದಕೂಡಲೆ ಸೂರ್ಯನು ಕತ್ತಲಾಗಿಹೋಗುವನು, ಚಂದ್ರನು ಬೆಳಕುಕೊಡದೆ ಇರುವನು, ನಕ್ಷತ್ರಗಳು ಆಕಾಶದಿಂದ ಉದುರುವವು, 30ಆಕಾಶದ ಶಕ್ತಿಗಳು ಕದಲುವವು. ಆಗ ಮನುಷ್ಯ ಕುಮಾರನನ್ನು ಸೂಚಿಸುವ ಗುರುತು ಆಕಾಶದಲ್ಲಿ ಕಾಣಬರುವದು. ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು ಎದೆಬಡಕೊಳ್ಳುವರು, ಮತ್ತು ಮನುಷ್ಯ ಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಆಕಾಶದ ಮೇಘಗಳ ಮೇಲೆ ಬರುವದನ್ನು ಕಾಣುವರು. 31ಮತ್ತು ಆತನು ತುತೂರಿಯ ಮಹಾ ಶಬ್ದದಿಂದ ತನ್ನ ದೂತರನ್ನು ಕಳುಹಿಸುವನು. ಅವರು ಆತನು ಆದುಕೊಂಡವರನ್ನು ಆಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಯ ವರೆಗೆ ನಾಲ್ಕೂ ದಿಕ್ಕುಗಳಿಂದ ಒಟ್ಟುಗೂಡಿಸುವರು.**

24:29-31ನ್ನು ನಾವು ಪ್ರಕಟಣೆ ಗ್ರಂಥದ ಯೆರೂಸಲೇಮಿನ ನಾಶನದ ವರ್ಣನೆ ಎಂದು ಅರ್ಥೈಸೋಣವೋ? ಯಾರು ಈ ದೃಷ್ಟಿಕೋನವನ್ನು ಹಿಡಿದುಕೊಳ್ಳುತ್ತಾರೋ ಅವರು ಅತೀಯಾದ ಅಲಂಕಾರಿಕ ಸ್ವರೂಪವನ್ನು ಹೊಂದಿರುವ ಈ ವೇದಭಾಗವು ಮಹಾ ಸಂಕಟ ಮತ್ತು ನಾಶನದ ಸಮಯದಲ್ಲಿ ನಾಶನವನ್ನು ವ್ಯಕ್ತಪಡಿಸುತ್ತದೆ. ಬಾಬೇಲಿನ ಪತನದ ವರ್ಣನೆ (ಯೆಶಾಯ 13:10, 19), ನಕ್ಷತ್ರ ಸೈನ್ಯವೆಲ್ಲಾ ಕ್ಷಯಿಸುವದು (ಯೆಶಾಯ 34:4), ಮತ್ತು ಐಗುಪ್ತದ ಯಾತನೆ (ಯೆಹೆಜ್ಕೇಲ 32:7, 8) ಇಂತಹದೇ ಪ್ರಕಟನೆಯ ಚಿತ್ರಣವನ್ನು ಒಳಗೊಂಡಿದೆ. ಈ ದೃಷ್ಟಿಕೋನವನ್ನು ಹಿಡಿದುಕೊಳ್ಳುವವರು ಹೇಳುತ್ತಾರೆ ಇದನ್ನು ಕ್ರಿಸ್ತನ ಬರೋಣಕ್ಕೆ ಹೋಲಿಸುವದು ಅನವಶ್ಯಕವಾಗಿದೆ. ಇದರೊಟ್ಟಿಗೆ, ವಾಕ್ಯಭಾಗವು ಯೆರೂಸಲೇಮಿನ ಪತನವನ್ನು ಉಲ್ಲೇಖಿಸದಿದ್ದಲ್ಲಿ, ಇದರಲ್ಲಿ ಹರಿದು ಬರುವ ವಿಚಾರವು ಹೆಚ್ಚಾಗಿ ವಚನ 34ಕ್ಕೆ ಸಂಬಂಧಿಸಿದ್ದಾಗಿದೆ, ಇದು ಯೆರೂಸಲೇಮಿನ ಪತನ ಮತ್ತು ಕ್ರಿಸ್ತನ ಬರೋಣವನ್ನು ವಿಭಾಗಿಸುವ ಸ್ವಾಭಾವಿಕ ಹೇಳಿಕೆಯಾಗಿದೆ.

ಏನೇ ಆದರೂ, 24:29-31 ರಲ್ಲಿರುವ ದೃಷ್ಟಿಕೋನ ಕ್ರಿಸ್ತನ ಎರಡನೆ ಬರೋಣಕ್ಕೆ ಸಂಬಂಧಿಸಿದೆ ಎಂಬುದು ಹೆಚ್ಚು ಸಮಂಜವಾಗಿದೆ. ಹಿಂದಿನ ವಚನಗಳಲ್ಲಿ ಹೇಳಿದಂತೆ (24:27, 28), ಯೇಸು ತನ್ನ ಬರೋಣವನ್ನು ಯಾರೊಬ್ಬರೂ ತಪ್ಪಿಸಿಕೊಳ್ಳಲಾರದ ಸಂಗತಿ ಎಂದು ವರ್ಣಿಸುತ್ತಾನೆ; ಅದನ್ನು ಎಲ್ಲರೂ ನೋಡುತ್ತಾರೆ. ಇನ್ನೂ ಮುಂದಕ್ಕೆ "ದೇವದೂತರು," "ಮಹಾ ತುತೂರಿ ಶಬ್ದ," ಮತ್ತು "ದೇವರಾದುಕೊಂಡವರು" ಇತರ ವಾಕ್ಯಭಾಗಗಳಲ್ಲಿ ವಿವರಿಸಿದಂತೆ ಕ್ರಿಸ್ತನ ಬರೋಣದಲ್ಲಿ ಪ್ರಾಮುಖ್ಯ ಅಂಶಗಳಾಗಿವೆ. ಸುಳ್ಳ ವರದಿಗಳಿಗೆ ವಿಭಿನ್ನವಾಗಿ, ಅವರು ಮೆಸ್ಸೀಯನ ಬರೋಣವನ್ನು ಆಲಿಸುವರು ಯೇಸು ತನ್ನ ಶಿಷ್ಯರು ಸತ್ಯವನ್ನು ತಿಳಿದುಕೊಳ್ಳಬೇಕೆಂದು ಬಯಸಿದರು.

**ವಚನ 29. ತೀರಿದ ಕೂಡಲೇ** (*eutheōs*) ಎಂಬ ಕ್ರಿಯಾ ವಿಶೇಷಣ ಕಠಿಣವಾಗಿದೆ. ಖಂಡಿತವಾಗಿಯೂ, ಈ ವಚನದಲ್ಲಿರುವ ಘಟನೆ (**ಸೂರ್ಯನು** ಕತ್ತಲಾಗುವನು ಮತ್ತು **ಚಂದ್ರನು** ಕತ್ತಲಾಗುವನು ಮತ್ತು **ನಕ್ಷತ್ರಗಳು** ಬೀಳುವವು) ಯೆರೂಸಲೇಮ ಪಟ್ಟಣ ಮಹಾ **ಸಂಕಟವನ್ನು** ಅನುಭವಿಸಿದ **ನಂತರ** ವಾಸ್ತವವಾಗಿ ಸಂಭವಿಸುವದಿಲ್ಲ. ಅದಕ್ಕೂ ಹೆಚ್ಚಾಗಿ, ಕ್ರಿಸ್ತನು ಆ ಸಮಯದಲ್ಲಿ ತಿರುಗಿ ಬರುವದಿಲ್ಲ, ಮತ್ತು ಆತನು ಇನ್ನೂ ತಿರುಗಿ ಬಂದಿರುವದಿಲ್ಲ - ಎರಡು ಸಾವಿರ ವರ್ಷಗಳು ಗತಿಸಿದ ನಂತರವೂ ಪುನಃ ಬರಲಿಲ್ಲ.

ಕೆಲವು ಅಂಶಗಳನ್ನು ಪರಿಗಣಿಸಬೇಕು: (1) "ತಕ್ಷಣ" ಎಂಬ ಪದವನ್ನು ವಚನ 36ರ ಬೆಳಕಿನಲ್ಲಿ ಪರಿಗಣಿಸಬೇಕು, ಅಲ್ಲಿ ಯೇಸು ಆತನ ಬರೋಣದ ಸಮಯವು "ಯಾರಿಗೂ ತಿಳಿಯದು" ಆದರೆ "ತಂದೆಗೆ ಮಾತ್ರ ಗೊತ್ತಿದೆ" ಎಂದು ಹೇಳುತ್ತಾನೆ. ಈ ಹೇಳಿಕೆ ಆತನು ವಚನ 29ರಲ್ಲಿರುವ ಘಟನೆಗಳಿಗೆ ಒಂದು ನಿರ್ದಿಷ್ಟವಾದ ಸಮಯದ ಚೌಕಟ್ಟನ್ನು ನೀಡುವದಿಲ್ಲ. (2) ವಚನವು ಪ್ರಕಟನೆಯ ದರ್ಶನದ ಕಲ್ಪನೆಯನ್ನು ಒಳಗೊಂಡಿದೆ ಅದನ್ನು ಬಹುಶಃ ವಾಸ್ತವವಾಗಿ ತೆಗೆದುಕೊಳ್ಳಲಾಗುವದಿಲ್ಲ. ಇದಕ್ಕೆ ಸಂಬಂಧಿಸಿದ ಉದಾಹರಣೆಯೊಂದು ಅಪೊಸ್ತಲರ ಕೃತ್ಯಗಳು 2:15-21ರಲ್ಲಿ ಕಂಡುಬರುತ್ತದೆ. ಆ ಮೂಲ ವಾಕ್ಯಭಾಗದಲ್ಲಿ, ಪೇತ್ರನು ಯೋವೇಲನ ಪ್ರವಾದನಾ ಗ್ರಂಥ 2ನೇ ಅಧ್ಯಾಯದಲ್ಲಿರುವ ಪ್ರವಾದನೆಯನ್ನು ಹೇಳುತ್ತಾನೆ - ಅದು ಸಹ ಅದೇ ರೀತಿಯ ಕಲ್ಪನೆಯನ್ನು ಒಳಗೊಂಡಿದೆ - ಅದು ಪಂಚಾಶತ್ತಮದಿನದಂದು ನೆರವೇರಿತು. ಸೂರ್ಯನು ನಿಜವಾಗಿಯೂ ಕತ್ತಲಾಗದಿದ್ದರೂ ಮತ್ತು ಚಂದ್ರನು ರಕ್ತವರ್ಣಕ್ಕೆ ತಿರುಗದಿದ್ದರು ಇದು ನಿಜವಾದ ಸಂಗತಿಯಾಗಿತ್ತು. (3) "ತಕ್ಷಣ" ಎಂಬ ಪದವು "ಪ್ರವಾದನೆಯ ಮುನ್‌ಸೂಚನೆಯನ್ನು ಮೋಟುಗೋಳಿಸುವು." ಕೆಲವೊಮ್ಮೆ ಪ್ರವಾದಿಗಳು ಎರಡು ಘಟನೆಗಳನ್ನು ಅತ್ಯಂತ ನಿಕಟವಾಗಿರುವಂತೆ ವರ್ಣಿಸುತ್ತಾನೆ ಆದರೆ ನೈಜತೆ ಮತ್ತು ಅಂತ್ಯಕಾಲ ಎರಡನ್ನೂ ಈ ಅಧ್ಯಾಯದಲ್ಲಿ ಒಟ್ಟಾಗಿ ಚರ್ಚಿಸಲಾಗಿದೆ ಇದು ಇವೆರಡರ ಮಧ್ಯದಲ್ಲಿ ನಿಕಟ ಸಂಬಂಧವಿರಬಹುದು ಎಂದು ಸೂಚಿಸುತ್ತದೆ. ಇವೆರಡು ಯೇಸುವಿನ

ಬೇರೆಯಾಗಿರುತ್ತವೆ. ದೇವಾಲಯದ ನಾಶನ ಮತ್ತು ಅಂತ್ಯಕಾಲ ಇವೆರಡನ್ನು ಸೇರಿಸಿ ಈ ಅಧ್ಯಾಯದಲ್ಲಿ ಚರ್ಚಿಸಿರುವ ವಾಸ್ತವವು ಇವೆರಡರ ಮಧ್ಯದಲ್ಲಿರುವ ವೇದಶಾಸ್ತ್ರದ ಬಂದುತ್ವ ಹತ್ತಿರವಾಗಿರುವದು ಸೂಚಿಸುತ್ತದೆ. ಇವೆರಡು ಯೇಸುವಿನ ಸೇವೆಯ ನೆರವೇರಿಕೆಗಳಾಗಿವೆ. ಇವೆರಡರಲ್ಲಿಯೂ ನ್ಯಾಯ ತೀರ್ಪು ಒಳಗೊಂಡಿದೆ ಅದು ಆತನನ್ನು ತನ್ನ ಜನರಿಗೆ ದೇವರ ನಿಜವಾದ ಮತ್ತು ಅಂತಿಮ ಸಂದೇಶ ಎಂದು ಸಮರ್ಥಿಸುತ್ತದೆ.[29]

**ವಚನ 30.** ಯೇಸುವಿನ ಶಿಷ್ಯರು ಕೇಳುತ್ತಾರೆ, "ನೀನು *ಪ್ರತ್ಯಕ್ಷನಾಗುವದಕ್ಕೆ* ಸೂಚನೆ ಏನು?" (24:3; ಒತ್ತಿ ಹೇಳಿರುವದು ಸೇರಿದೆ). ಕರ್ತನು ಈ ಹಂತದಲ್ಲಿ ಅವರ ಪ್ರಶ್ನೆಗೆ ಉತ್ತರಿಸಿದ್ದಾನೆ: **ಆಗ ಮನುಷ್ಯ ಕುಮಾರನನ್ನು ಸೂಚಿಸುವ ಗುರುತು** ಎರಡನೆಯ ಬರೋಣವಾಗಿರುತ್ತದೆ. ಥಟ್ಟನೆ ಮತ್ತು ಅನೀರಿಕ್ಷಿತವಾಗಿ ದೇವರು ನೇಮಿಸಿದ ದಿನದಂದು ಕ್ರಿಸ್ತನು ಬರುತ್ತಾನೆ. ಅಡವಿಯೊಳಗೆ ಮತ್ತು ಒಳಗಿನ ಕೋಣೆಯಲ್ಲಿ ಕಂಡುಬರುವ ಸುಳ್ಳು ಮೆಸ್ಸೀಯರನ್ನು ಹೊರತುಪಡಿಸಿ, ಆತನು ಪ್ರತ್ಯಕ್ಷನಾಗುವದು ಎಲ್ಲರಿಗೂ ಕಾಣುವದು ಮತ್ತು ಕೇಳಿಸುವದು (ಮಾರ್ಕ 13:26; ಲೂಕ 21:27; 1 ಥೆಸಲೋನಿಕ 4:16; ಪ್ರಕಟಣೆ 1:7). ಸಿದ್ಧರಾಗದೆ ಇರುವ ಈ ಲೋಕದ ನಿವಾಸಿಗಳು ಆತನ ಸನ್ನಿಧಿಯಲ್ಲಿ, **ಎದೆಬಡಕೊಳ್ಳುವರು. ಭೂಲೋಕದ ಎಲ್ಲಾ ಜನಾಂಗವು** ನಿಶ್ಚಯವಾಗಿ ಸೇರಿಸಿಕೊಳ್ಳುವದಿಲ್ಲ ಯಾರು ಕರ್ತನ ಬರೋಣಕ್ಕಾಗಿ ಯಾರು ಕಾಯ್ದಿದಿರುತ್ತಾರೋ ಮತ್ತು ಪ್ರಾರ್ಥಿಸುತ್ತಾರೋ ಅವರು ಮಾತ್ರ ಇರುವವರೊಂದಿಗೆ ಸೇರುವದಿಲ್ಲ (ನೋಡಿರಿ 1 ಕೊರಿಂಥ 16:22; 2 ತಿಮೋಥೆ 4:8). ಆತನ ಬರೋಣವು ಆತನ **ಬಲದಿಂದಲೂ ಬಹು ಮಹಿಮೆಯಿಂದಲೂ** ತೋರಿಸುವಂಥದ್ದಾಗಿದೆ. **ಮನುಷ್ಯ ಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಬರುವನೆಂದು** ದಾನಿಯೇಲ 7:13, 14ರಿಂದ ತೆಗೆದುಕೊಳ್ಳಲಾಗಿದೆ, ಈ ಮೂಲ ವಾಕ್ಯಭಾಗವು ಕ್ರಿಸ್ತನ ಅಧಿಕಾರ ಮತ್ತು ಆಳ್ವಿಕೆಗೆ ಒತ್ತಿ ಹೇಳುತ್ತದೆ.

**ವಚನ 31. ತುತೂರಿಯ ಮಹಾ ಶಬ್ದದಿಂದ** ಬರಲಿಕ್ಕಿರುವ ನ್ಯಾಯತೀರ್ಪಿನ ಎಚ್ಚರಿಕೆ ಎಂದು ಅರ್ಥೈಸಲಾಗಿದೆ; ಹಾಗಿದ್ದರೂ, ಆ ಸಮಯದಲ್ಲಿ, ಜನರು ಪಶ್ಚಾತ್ತಾಪಪಡುವದಕ್ಕೆ ಬಹಳ ತಡವಾಗಿರುತ್ತದೆ, ಬದಲಾಗಿ ತುತೂರಿ ಧ್ವನಿಯು ನೀತಿವಂತರನ್ನು ಕೂಡಿಸಲು ಉಪಯೋಗಿಸಲಾಗಿದೆ (ನೋಡಿರಿ ಯೆಶಾಯ 27:13). ಪೌಲನು, "ತುತೂರಿಯ ಊದಲಾಗಿ ಸತ್ತವರು ನಿರ್ಲಯರಾಗಿ ಎಬ್ಬಿಸಲ್ಪಡುವರು" ಎಂದು ಹೇಳಿದ್ದಾನೆ (1 ಕೊರಿಂಥ 15:52); "ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನದೂತನ ಶಬ್ದದೊಡನೆಯೂ ದೇವರ ತುತೂರಿಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು; ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು" (1 ಥೆಸಲೋನಿಕ 4:16).

"ತುತೂರಿ" (*salpinx*) ಎಂಬ ಪದಕ್ಕೆ ಗ್ರೀಕ್ ಪದವನ್ನು ಸೆಪ್ಟುಜೆಂಟ್‌ನಲ್ಲಿ ಇಬ್ರಿಯ ಪದಗಳನ್ನು *shopar*, ಮತ್ತು *ch$^{a}$tsots$^{e}$rah* ಅನುವಾದಿಸಲು ಉಪಯೋಗಿಸಲಾಗಿದೆ. *shopar*, ಎಂಬ ಪದವು ಹೆಚ್ಚು ಸಾಮಾನ್ಯವಾಗಿ ಟಗರಿನ ಕೊಂಬು ಎಂಬುದಾಗಿದೆ, ಅದೇ ಸಮಯದಲ್ಲಿ *ch$^{a}$tsots$^{e}$rah* ಎಂಬ ಪದವು ಉದ್ದವಾದ, ಮತ್ತು ನೇರವಾದ, ಪ್ರಜ್ವಲವಾದ ಮೊನೆಯನ್ನು ಹೊಂದಿರುವ ಲೋಹದ ಕೊಳವೆ.[30] ಎರಡರಲ್ಲಿ ಒಂದು ಸಾಧನವನ್ನು ಇಲ್ಲಿ ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ.

ಯೇಸು ತನ್ನ **ದೇವದೂತರು ... ಆತನು ಆದುಕೊಂಡವರನ್ನು ಒಟ್ಟುಗೂಡಿಸುವರು** ಎಂದು ಯೇಸು ಹೇಳಿದನು. ದೇವದೂತರನ್ನು ಕಳುಹಿಸುವ ಮತ್ತು ದೇವರ ನಂಬಿಕೆಯುಳ್ಳ ಜನರನ್ನು ಒಟ್ಟು ಗೂಡಿಸುವ ಅಧಿಕಾರದ ನೈಜತೆಯಲ್ಲಿ ಆತನ ದೈವತ್ವ ಕಂಡುಬರುತ್ತದೆ. ಯೇಸು ಹಣಜಿಯ ಮತ್ತು ಬಲೆಯ ಸಾಮ್ಯದಲ್ಲಿ ತನ್ನ ದೇವದೂತರು ಯುಗದ ಸಮಾಪ್ತಿಯಲ್ಲಿ ದುಷ್ಟರೊಳಗಿಂದ ನೀತಿವಂತವರನ್ನು ಪ್ರತ್ಯೇಕಿಸುವ ದೂತರಾಗಿ ಕಾರ್ಯ ಮಾಡುತ್ತಾರೆ ಎಂದು ಉಲ್ಲೇಖಿಸುತ್ತಾನೆ (13:41, 42, 49, 50).

ಯೆಹೂದ್ಯರು ತಾವು ನಾಲ್ಕು ದಿಕ್ಕುಗಳಿಂದ ಒಟ್ಟುಗೂಡಿಸುವ ದೇವರಾದುಕೊಂಡವರು ಎಂದು ನಂಬುತ್ತಾರೆ (ಧರ್ಮೋಪದೇಶಕಾಂಡ 30:4; ಯೆಶಾಯ 11:12; 43:5; 49:5; 56:8).[31] ಈ ನಿರೀಕ್ಷೆಯು ಯೆಹೂದ್ಯರ ಪ್ರಾರ್ಥನೆ Shemoneh Esreh (ಹದಿನೆಂಟನೆಯ ಆಶೀರ್ವಾದಗಳು) ಇದರಲ್ಲಿ ಪ್ರತಿಬಿಂಬಿಸುತ್ತದೆ. ಹತ್ತನೇ ಅಂತ್ಯಾಶೀರ್ವಾದ ಹೀಗೆ ಹೇಳುತ್ತದೆ. "ನಮ್ಮ ಸ್ವಾತಂತ್ರ್ಯಕ್ಕಾಗಿ ದೊಡ್ಡ ತುತ್ತೂರಿಯನ್ನು ಊದಿರಿ ಮತ್ತು ಭೂಲೋಕದ ನಾಲ್ಕು ದಿಕ್ಕುಗಳಲ್ಲಿ ಚದರಿಹೋಗಿರುವ ನಮ್ಮನ್ನು ಒಟ್ಟಿಗೆ ಸೇರಿಸಿದ್ದಕ್ಕಾಗಿ ಧ್ವಜವನ್ನು ಎತ್ತಿರಿ. ಕರ್ತನೇ ನಿನಗೆ ಸ್ತೋತ್ರವಾಗಲಿ, ಚದುರಿಹೋಗಿರುವ ನಮ್ಮನ್ನು ಒಟ್ಟಿಗೆ ಸೇರಿಸಿದ್ದಕ್ಕಾಗಿ ಧ್ವಜವನ್ನು ಎತ್ತಿರಿ. ಕರ್ತನೇ ನಿನಗೆ ಸ್ತೋತ್ರವಾಗಲಿ ಚದುರಿಹೋಗಿರುವ ನಿನ್ನ ಜನರಾದ ಇಸ್ರಾಯೇಲರನ್ನು ತಿರುಗಿ ಸೇರಿಸುತ್ತಿ." 31ನೇ ವಚನದಲ್ಲಿರುವ "ಆಯ್ದು ಕೊಂಡವರು" ಎನ್ನುವ ಪದವು, ಹಳೆ ಒಡಂಬಡಿಕೆಯಲ್ಲಿದ್ದ ಪ್ರಾಮಾಣಿಕ ಇಸ್ರಾಯೇಲರನ್ನು ಒಳಗೊಂಡಿದೆ, ಇದು ಖಂಡಿತವಾಗಿಯು ಹೊಸ ಒಡಂಬಡಿಕೆಯಲ್ಲಿದ್ದ ಪ್ರಾಮಾಣಿಕ ಕ್ರೈಸ್ತರನ್ನು ಸಹ ಉಲ್ಲೇಖಿಸುತ್ತದೆ. ಯೇಸುವಿನ ಹಿಂಬಾಲಕರನ್ನು ಸೂಚಿಸಲು ಉಪಯೋಗಿಸಿರುವ ಪದವನ್ನು ಈ ಅಧ್ಯಾಯದಲ್ಲಿ ಇನ್ನೂ ಎರಡು ಬಾರಿ ಉಪಯೋಗಿಸಲಾಗಿದೆ (24:22, 24).

**ದೂತರು ಆದುಕೊಂಡವರನ್ನು ನಾಲ್ಕೂ ದಿಕ್ಕುಗಳಿಂದ ಒಟ್ಟುಗೂಡಿಸುವರು.** ಇದು ಈಡೀ ಲೋಕವನ್ನು ಉಲ್ಲೇಖಿಸುವ ಒಂದು ಪ್ರಾಚೀನ ವಿಧಾನ ವಿಸ್ತಾರದ ನಾಲ್ಕು ದಿಕ್ಕುಗಳು (ನೋಡಿರಿ ಯೆರೆಮಿಯ 49:36; ಯೆಹೆಜ್ಕೇಲ 37:9; ದಾನಿಯೇಲ 7:2; 8:8; ಜೆಕರ್ಯ 2:6; ಪ್ರಕಟಣೆ 7:1). ಇದರ ಅರ್ಥ ಆಕಾಶದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ.

## ಈ ಸಂತತಿ ಇರುವಾಗ ಯೆರೂಸಲೇಮ ನಾಶನವಾಗುವದು (24:32-35)

**[32]ಅಂಜೂರದ ಮರದ ದೃಷ್ಟಾಂತದಿಂದ ಬುದ್ಧಿಕಲಿಯಿರಿ. ಅದರ ಕೊಂಬೆ ಇನ್ನೂ ಎಳೆಯದಾಗಿದ್ದು ಎಲೆ ಬಿಡುವಾಗ ಬೇಸಿಗೆಯು ಹತ್ತರವಾಯಿತೆಂದು ತಿಳುಕೊಳ್ಳುತ್ತೀರಲ್ಲಾ. [33]ಹಾಗೆಯೇ ನೀವು ಸಹ ಇದನ್ನೆಲ್ಲಾ ನೋಡುವಾಗ ಆ ದಿನವು ಹತ್ತರವದೆ, ಬಾಗಲಲ್ಲೇ ಅದೆ ಎಂದು ತಿಳುಕೊಳ್ಳಿರಿ. [34]ಇದೆಲ್ಲಾ ಆಗುವ ತನಕ ಈ ಸಂತತಿಯು ಅಳಿದುಹೋಗುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. [35]ಭೂಮ್ಯಾಕಾಶಗಳು ಅಳಿದುಹೋಗುವವು ಆದರೆ ನನ್ನ ಮಾತುಗಳು ಅಳಿದುಹೋಗುವದೇ ಇಲ್ಲ.**

**ವಚನ 32.** ಸ್ಪಷ್ಟವಾಗಿ, ಈ ಪರಿಸ್ಥಿತಿಯಲ್ಲಿ, ಯೇಸು ಯೆರೂಸಲೇಮಿನ ನಾಶನದ ವಿಷಯಕ್ಕೆ ಹಿಂತಿರುಗುತ್ತಾನೆ. ಈ ಹಂತದಲ್ಲಿ ಆತನು **ಅಂಜೂರದ ಮರದ** ದೃಷ್ಟಾಂತವನ್ನು ನೀಡಿರುವದು ನೈಜವಾಗಿದೆ. ಆತನು ಜನರು ಬದಲಾಗುತ್ತಿರುವ ಕಾಲವನ್ನು ಕೆಲವು ಪ್ರಾಕೃತಿಕ ಸೂಚನೆಗಳ ಸ್ವರೂಪದ ಮೂಲಕ ಗುರುತಿಸುತ್ತಾರೆ. ವಸಂತ ಋತುವಿನ ಕಾಲದಲ್ಲಿ ಅಂಜೂರದ **ಕೊಂಬೆಗಳು ಚಿಗುರುತ್ತವೆ. ಎಲೆಗಳು** ಚಿಗುರುವದು **ಬೇಸಿಗೆ** ಕಾಲ ಹತ್ತಿರವಾಗಿದೆ ಎಂದು ಸೂಚಿಸುತ್ತದೆ (ನೋಡಿರಿ 21:19ರ ಮೇಲಿನ ವ್ಯಾಖ್ಯಾನ). ಕ್ರಿಸ್ತನು ಹೇಳುತ್ತಾನೆ ಪ್ರಕೃತಿಯಲ್ಲಿರುವ ಸೂಚನೆಗಳ ಸ್ವರೂಪವನ್ನು ನೋಡಿ ಕಾಲಗಳನ್ನು ನಿರ್ಧರಿಸ ಬಲ್ಲವರಾದ ನೀವು ಬರಲಿಕ್ಕಿರುವ ಯೆರೂಸಲೇಮಿನ ನಾಶನವನ್ನು ಆತ್ಮೀಕ ಸೂಚನೆಗಳನ್ನು ಗ್ರಹಿಸಿಕೊಳ್ಳುವದರ ಮೂಲಕ ತಿಳಿದುಕೊಳ್ಳಬಹುದು.

**ವಚನ 33.** ಯೇಸು ತನ್ನ ಶಿಷ್ಯರಿಗೆ, **ಹಾಗೆಯೇ ನೀವು ಸಹ ಇದನ್ನೆಲ್ಲಾ ನೋಡುವಾಗ ಆ ದಿನವು ಹತ್ತರವದೆ, ಬಾಗಲಲ್ಲೇ ಅದೆ ಎಂದು ತಿಳುಕೊಳ್ಳಿರಿ** ಎಂದು ಹೇಳಿದನು. "ಈ ದಿನವು ಹತ್ತರವದೆ" ಎಂಬ ವಾಕ್ಯಭಾಗವು NASBಯಲ್ಲಿ ಕ್ರಿಸ್ತನ ಎರಡನೇ ಬರೋಣವನ್ನು ಉಲ್ಲೇಖಿಸುವ ವಚನವನ್ನಾಗಿ ಕಂಡುಬರುತ್ತದೆ. ಇದನ್ನು NLTಯಲ್ಲಿ ಹೆಚ್ಚು ಸ್ಪಷ್ಟಗೊಳಿಸಲಾಗಿದೆ, ಅದು ಹೀಗೆ ಹೇಳುತ್ತದೆ, "ಆತನ ಬರೋಣ ಅತೀ ಹತ್ತಿರವಾಗಿದೆ."

ಮೂಲ ಪಠ್ಯವನ್ನು ಸಹ ಅನುವಾದಿಸಲಾಗಿದೆ "ಅದು ಹತ್ತಿರದಲ್ಲಿದೆ" (KJV; NIV) ಅಥವಾ "ಸಮಯವು ಹತ್ತಿರವಾಗಿದೆ" ಎಂದು (JNT) ಅನುವಾದಿಸಲಾಗಿದೆ. ಈ ಅನುವಾದಕ್ಕೆ ಸನ್ನಿವೇಶದಿಂದ ಹೆಚ್ಚು ಬೆಂಬಲ ದೊರಕಿದೆ. "ಇದು" "ಬೇಸಿಗೆ ಕಾಲವನ್ನು" ಉಲ್ಲೇಖಿಸ ಬಹುದು (24:32),[32] Josephus ರವರ ಪ್ರಕಾರ, ಯೆರೂಸಲೇಮಿನ ಪತನ ಕ್ರಿ.ಶ. 70ರಲ್ಲಿ Ab ಮಾಸದ (July/August) ಹತ್ತನೆಯ ದಿನದಲ್ಲಿ ಸಂಭವಿಸಿತು.[33]

**ವಚನ 34.** ಯೇಸು ಇನ್ನೂ ಮುಂದಕ್ಕೆ ಹೀಗೆ ಹೇಳುತ್ತಾನೆ, **ಇದೆಲ್ಲಾ ಆಗುವ ತನಕ ಈ ಸಂತತಿಯು ಅಳಿದು ಹೋಗುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ.** ಈ ವಚನವು ಹೇಗೆ ವಿವರಿಸಬೇಕು? ಇದರ ಅರ್ಥೈಸುವಿಕೆ "ಸಂತತಿ" ಮತ್ತು "ಇದೆಲ್ಲಾ ಆಗುವ ತನಕ" ಎಂಬ ಪದಗಳತ್ತ ತಿರುಗಿಸುತ್ತದೆ. "ಸಂತತಿ" (*genea*) ಎಂಬ ಪದವನ್ನು "ಈ ಜನರು" ಎಂಬ ಅರ್ಥವನ್ನು ನೀಡುವಂತೆ ಅಂದರೆ ಯೆಹೂದಿ ಜನಾಂಗ ಎಂದು ನಾವು ಅರ್ಥೈಸಬಹುದೋ? ಈ ದೃಷ್ಟಿಕೋನವನ್ನು ಇಟ್ಟುಕೊಂಡಿರುವವರು ಯೆಹೂದ್ಯ ಜನಾಂಗ ಆತನು ತಿರುಗಿ ಬರುವರೆಗೆ ಅಳಿದು ಹೋಗುವದಿಲ್ಲ ಎಂದು ಯೇಸು ವಾಗ್ದಾನ ಮಾಡುತ್ತಾನೆ ಎಂದು ನಂಬುತ್ತಾರೆ. ಆದರೂ, Jack P. Lewis ರವರು ಹೀಗೆ ತೋರಿಸಿದ್ದಾರೆ,

> *Genos* (ಜನಾಂಗ) ಮತ್ತು *genea* (ಸಂತತಿ) ಇವುಗಳ ಮಧ್ಯ ವ್ಯತ್ಯಾಸವಿದೆ … ಮತ್ತಾಯನ ಸುವಾರ್ತೆಯಲ್ಲಿ ಎಲ್ಲೆಡೆ *genea* ಅಂದರೆ ಒಂದು ಸಮಯದಲ್ಲಿ ಜೀವಿಸುತ್ತಿದ್ದ ಜನರು ಮತ್ತು ಸಾಮಾನ್ಯವಾಗಿ ಯೇಸುವಿನ ಸಮಯದಲ್ಲಿ ಜೀವಂತವಾಗಿದರು (1:17; 11:16; 12:39, 41, 45; 23:36; ಮಾರ್ಕ 8:38; ಲೂಕ 11:50f.; 17:25), ಮತ್ತು ಇಲ್ಲಿಯೂ ಸಹ ನಿಸ್ಸಂಶಯವಾಗಿ ಇದೇ ಅರ್ಥವನ್ನು ಕೊಡುತ್ತದೆ. ದೇವಾಲಯದ ಪತನ ಒಂದು ಸಂತತಿ ಅಳಿತುಹೋಗುವ ಮೊದಲೇ ಇರಬಹುದು.[34]

ವಚನ 34ರಲ್ಲಿರುವ "ಇದೆಲ್ಲಾ ಆಗುವ ತನಕ" ಸ್ವಾಭಾವಿಕವಾಗಿ (ಒಂದು ವೇಳೆ ವಿಶಾಲವಾದ ಸನ್ನಿವೇಶ ಇಲ್ಲವಾಗಿದ್ದಲ್ಲಿ) ವಚನ 33ರಲ್ಲಿ ಉದ್ದೇಶಿಸಿದ "ಸಂಗತಿಗಳನ್ನು" ಸೂಚಿಸುತ್ತದೆ. ಇದರ ಅರ್ಥ ಈ ಮೂಲ ಪಠ್ಯದಲ್ಲಿ ಮೊದಲೇ ವರ್ಣಿಸಿದ ಸಂಗತಿಗಳು ನೇರವೇರುತ್ತವೆ. "ಇದೆಲ್ಲಾ ಆಗುವ ತನಕ" ಎಂಬ ವಾಕ್ಯಭಾಗವು ಅಧ್ಯಾಯದ ಪ್ರಾರಂಭಕ್ಕೆ ಕೊಂಡೊಯ್ಯುತ್ತದೆ. ಅಲ್ಲಿ ಕರ್ತನು ತನ್ನ ಉಪದೇಶವನ್ನು ಯೆರೂಸಲೇಮಿನ ನಾಶನದ ಭವಿಷ್ಯವಾಣಿಯೊಂದಿಗೆ ಮತ್ತು ಈ ಎಲ್ಲಾ "ಸಂಗತಿಗಳು" ಯಾವಾಗ ಸಂಭವಿಸುತ್ತವೆ ಎಂಬ ಶಿಷ್ಯರ ಪ್ರಶ್ನೆಯೊಂದಿಗೆ ಪ್ರಾರಂಭಿಸುತ್ತಾನೆ (24:2, 3). ವಚನ 36 ಯೇಸು ಯಾವಾಗ ತಿರುಗಿ ಬರುತ್ತಾನೆ ಎಂಬುದು ತಂದೆಯ ಹೊರತು "ಯಾರಿಗೂ ತಿಳಿದಿಲ್ಲ" ಎಂದು ಹೇಳುವದರಿಂದ, "ಇದೆಲ್ಲ ಆಗುವ ತನಕ" ಎರಡನೆಯ ಬರೋಣದಲ್ಲಿ ಸೇರುವದಿಲ್ಲ.

**ವಚನ 35.** ಯೇಸು ಈಗಾಗಲೇ ತನ್ನ ಎರಡನೆಯ ಬರೋಣ ಮತ್ತು ಯುಗದ ಸಮಾಪ್ತಿಯ ಕುರಿತು ಪ್ರವಾದನೆಯನ್ನು ಹೇಳಿದ್ದಾನೆ (24:29-31), ಮತ್ತು ಇಲ್ಲಿ ಆತನು **ಭೂಮ್ಯಾಕಾಶಗಳು ಅಳಿದುಹೋಗುವವು** ಸತ್ಯವಾಗಿದೆ ಎಂದು ಪುನಃ ಖಚಿತಪಡಿಸುತ್ತಿದ್ದಾನೆ. ಇತರ ವಾಕ್ಯಭಾಗಗಳು ಈ ಬೋಧನೆಯನ್ನು ಬಲಪಡಿಸುತ್ತವೆ (2 ಪೇತ್ರ 3:7, 10-12). ಭೂಲೋಕವು ಮತ್ತು ಅದರಲ್ಲಿರುವ ಕಾರ್ಯಗಳು ತಾತ್ಕಾಲಿಕವಾಗಿವೆ, ಆದರೆ ದೇವರ ವಾಕ್ಯವು ಶಾಶ್ವತವಾದದ್ದು (1 ಪೇತ್ರ 1:24, 25). ಯೇಸು, **ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ** ಎಂದು ಹೇಳುವಾಗ, ಆತನು ತನ್ನ ಉಪದೇಶದಲ್ಲಿ ತನ್ನ ಪ್ರವಾದನೆಯ ವಿಶ್ವಾಸಾರ್ಹವಾಗಿದೆ ಎಂಬುದನ್ನು ದೃಢಪಡಿಸುತ್ತಿದ್ದಾನೆ.

**ಟಿಪ್ಪಣಿಗಳು**

[1]1Maccabees 1:47, 54, 59; 2 Maccabees 6:1-11; Josephus *Antiquities* 12.5.4. [2]Josephus *Wars* 4.3.7, 10; 4.5.4; 5.1.3. [3]Ibid., 4.3.10. [4]Ibid., 6.4.7. [5]Ibid., 6.6.1. ನೋಡಿರಿ ರೋಮನ್ನರು ಮರ್ಯಾದೆ ಮಾಡುವದಕ್ಕೆ ಅವರು ಹುದ್ದು ಮತ್ತು ಹಂದಿಯಿಂದ ಕಿಲೀಟವಿಟ್ಟು ಗೌರವಿಸುತ್ತಿದ್ದರು Michael J. Wilkins, "Matthew," in *Zondervan Illustrated Bible Backgrounds Commentary,* vol. 1, *Matthew, Mark, Luke,* ed. Clinton E. Arnold (Grand Rapids, Mich.: Zondervan, 2002), 148. [6]1 Maccabees 2:28. [7]Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 573. [8]Eusebius *Ecclesiastical History* 3.5.3. [9]Epiphanius Against Heresies 29.7.7. [10]ನೋಡಿರಿ William Hendriksen, *New Testament Commentary: Exposition of the Gospel According to Matthew* (Grand Rapids, Mich.: Baker Book House, 1973), 858.

[11]ನೋಡಿರಿ Josephus *Antiquities* 13.5.3. [12]During the Maccabean revolt, Mattathias and his sons "fled to the hills and left all that they had in the town" (1 Maccabees 2:28; NRSV). [13]Josephus *Wars* 5.12.3. [14]Ibid., 6.3.4. [15]*Numbers Rabbah* 3.6. [16]ನೋಡಿರಿ Mishnah *Taanith* 1.3. [17]Mishnah *Erubin* 4.3; 5.7. [18]Josephus *Wars* Preface 4. [19]Ibid., 5.10.5. [20]Ibid., 6.9.4.

[21]Ibid., 6.9.3. [22]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 606. [23]Eusebius *Ecclesiastical History* 3.5.3; Epiphanius Against Heresies 29.7.7. [24]Josephus *Antiquities* 20.5.1; 20.8.6, 10; *Wars* 2.8.1; 2.13.4, 5; 4.9.3-5. [25]Richard A. Horsley and John S. Hanson, *Bandits, Prophets, and Messiahs: Popular Movements in the Time of Jesus,* New Voices in Biblical Studies, 2 (New York: Winston Press, 1985), 162. [26]*Numbers Rabbah* 11.2; *Song Rabbah* 2.9. [27]Keener, 583. See Homer *Iliad* 11.395, 454; 22.42, 43, 335, 336, 353; 24.411; *Odyssey* 3.258-60. [28]Donald A. Hagner, *Matthew 14-28,* Word Biblical Commentary, vol. 33B (Dallas: Word Books, 1995), 707. [29]R. T. France, *The Gospel According to Matthew,* The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 334. [30]Francis Brown, S. R. Driver, and Charles *A. Briggs, A Hebrew and English Lexicon of the Old Testament* (Oxford: Clarendon Press, 1968), 348.

[31]*Psalms of Solomon* 8.28; 11.2-5; 17.26; 4 *Ezra* 13.39-50; *Testament of Asher* 7.7. [32]Jack P. Lewis, *The Gospel According to Matthew,* Part 2, The Living Word Commentary (Austin, Tex.: Sweet Publishing Co., 1976), 129. [33]Josephus *Wars* 6.4.5. ನೋಡಿರಿ ಯೆರೆಮೀಯ 52:12ರ ಪ್ರಕಾರ, ಅದೇ ದಿನಾಂಕದಿಂದ ಸೊಲೊಮೋನನ ದೇವಾಲಯವನ್ನು ನಾಶಮಾಡಲ್ಪಟ್ಟಿತು - "ಐದನೆ ತಿಂಗಳಿನ ಹತ್ತನೆ ದಿನವಾಗಿತ್ತು." Mishnah ಪ್ರಕಾರ ಎರಡು ದೇವಾಲಯಗಳು ತಿಂಗಳಿನ ಒಂಭತ್ತನೆಯ ದಿನದಂದು ನಾಶವಾದವೆಂದು ಹೇಳುತ್ತದೆ. (Mishnah *Taanith* 4.6.) [34]Lewis, 129-30.